இந்த வருஷ ஜயந்தி உத்ஸவத்தை 25-ம் வருஷ வெள்ளி விழாவாக சிறப்பாக நடத்துவது என தீர்மானிக்கப்பட்டிருக்கிறது. வெள்ளி விழாவை உத்தேசித்து ஒருமலர் (Souvenir) வெளியிட உத்தேசிக்கப்பட்டிருக்கிறது. இந்த வெள்ளி விழா மலரில் சுக்ல யஜுர் வேத சாஸ்திர விற்பன்னர்களுடைய படங்களை வெளியிட ஆவல் கொண்டுள்ளோம். அதனால் தாங்கள் தங்களுடைய Passport size photo ப்ளாக்கையோ, ப்ளாக் இல்லாவிட்டால் போட்டோவையோ ஒன்று வெகு சீக்கிரத்தில் அனுப்பித் தருமாறு அன்புடன் கேட்டுக்கொள்கிறோம். இதோடு தாங்கள் பிறந்த தேதி, ஊர், படித்த வேத பாடசாலை, வேத, சாஸ்திரங்களில் பயிற்சி, பெற்ற விசேஷ விருதுகள் முதலியவற்றையும் ஒரு தனி காகிதத்தில் எழுதி அனுப்ப வேணுமாய்க் கேட்டுக்கொள்கிறோம்.

தாங்கள் சுக்ல யஜுர் வேத பாடசாலை, சபை, சங்கம் இவைகளின் டிரஸ்டியாகவோ அல்லது முக்கிய பொறுப்புள்ள அங்கத்தினராகவோ இருந்தால், பாடசாலை, சபை பற்றின விபரங்களை (ஆரம்பித்த தேதி, அங்கத்தினர்கள், வித்தியார்த்திகள், அத்யாபகர்கள்) ஒரு சிறு குறிப்பாக ஒரு தனி காகிதத்தில் எழுதி அனுப்பினால் மலரில் வெளியிட வசதியாக இருக்கும்.

ஸ்ரீ யோகீஸ்வர யாக்ஞவல்க்யர், காண்வ மகரிஷி இவர்களின் பழைய காலத்து படங்கள், சிற்பங்கள், சிலைகள், கோயில்கள் இவைகளைப் பற்றின விபரங்கள், Photo Blockகுகள் இருந்தால் அனுப்பிக் கொடுத்தும், மேலும் மலர் சிறப்பாக வெளியிட உதவியும், வெள்ளி விழா மஹோத்ஸவத்திற்கு தாங்கள் விஜயம் செய்தும் சிறப்பாக நடத்திக் கொடுக்குமாறு கேட்டுக்கொள்கிறோம்.

தங்கள் அன்புள்ள,
**P. S. ஸ்ரீனிவாசன்,**
செயலாளர் & பொருளாளர்,
ஸ்ரீ யாக்ஞவல்க்ய ஜயந்தி மஹோத்ஸவ சபை.

நஞ்சை புகளூர், திருச்சி ஜில்லா
27—7—79

---

Sir,

A Souvenir is to be published in connection with the Silver Jubilee of Sri Yajnavalkya Jayanthi Celebrations at Nanjai Pugalur to be celebrated towards the end of October 79. You are requested to co-operate with us by sending (a) photo blocks of Sri Yajnavalkya, Kanva Maharishi (b) a short note on the temples, Sanghas or Sabhas Patasalas, Trustees, Ganapatigals and other distinguished persons of Shukla Yajur Veda of your place, district or state (c) other important materials available with you.

Can you give a brief account in English about the activities of your Sabha & Parishad
P.S.Srinivasan

Yours,
P. S. SRINIVASAN, B. Sc., B. L.,
SECRETARY & TREASURER.

श्री.

कण्व - परिषद् कार्यालय.
मुंबई. २९/७/७८

श्रीमान्. S. N. Rajpurohit.

Dear Sir,

Publication of "Kanva-Vikas" is held for want of a detailed report of the "Sammelan" and Kanva Parishad conference (1) The resolutions passed (2) the photos taken particularly of Procession & the photos taken of the ~~[illegible]~~ inaguration of sammelan on the dias etc (3) The speeches of President 'Swagat-Samiti', speeches of Guruji's Basava Pattan Guruji, Shri Murthiji etc and about report of in general programme are urgently required. They have to be translated in Marathi & then press-released hence the urgency. Publication of the issue without the Sammelan report is of no significance.

The blocks printed in "Golden" Souvenier viz (1) Kanva Mathadheesh [illegible] Shripadangalu and (2) First block of Shri Yajnavalkya with Kalyani & Maitrayi are also needed to be printed in the ~~[illegible]~~ "Kanva-Vikas" which may also be sent. We have been

अन्तर्देशीय पत्र कार्ड
INLAND LETTER CARD

Shri S. N. Rajpurohit
Jt. Secy ~~President~~
Sub - Post - master
PO HAVERI II
Dist : Dharwar
पिन PIN 580111

इस पत्र के भीतर कुछ न रखिए NO ENCLOSURES ALLOWED

प्रेषक का नाम और पता :— SENDER'S NAME AND ADDRESS :—

D. V. Kulkarni
Working President
Karnataka Parishad
पिन PIN
11 Shantarshet Road
Gaumt Rd. Bombay-7

यहां मोड़ें FIRST FOLD

D.V. Kulkarni

KANVA PARISHAT

ALL INDIA

# SHUKLA YAJURVEDA SAMMELAN 1978

ANANDVAN-AGADI, TALUKA: HAVERI, DISTRICT: DHARWAR, (KARNATAKA)

काण्व परिषद्

अखिल भारतीय शुक्ल यजुर्वेद सम्मेलन १९७८

आनंदवन - अगडी, जि॰ धारवाड (कर्नाटक)

The meeting of the Shukla Yajurveda Sammelan was held on 15th October 1978 at 6 P.M at Seetaram Mangala Karalaya, Haveri and the following resolutions are passed for the Shukla Yajurveda Sammelan, 1978.

President : Sri S.H. Badami

Vice-president: Sri G.G. Deshpande of Hallur
Sri Ramesh Patil Padki of Parasagad
Sri A.V. Kulkarni of Ron
Sri Gunde Rao Desai of Kamalapur
Sri Narayana Rao Talikoti, Advocate of Raichur
Sri (Dr.) G.S. Pachalaga of Hubli.

Vice-Presidents from Mysore and Bangalore and other states are subject to the approval by the President and he is authorised to nominate the Vice-President.

OFFICE BEARERS OF SAMMELAN:

General Secretary : Sri N.C. Desai

Joint Secretary : Sri S.N. Rajpurohit
Sri V.G. Havnur

Treasurer : Sri Ramesh Naik Badami of Haveri

Internal Auditor : Sri D.M. Savadi

It is unanimously resolved that the account to the opened at State Bank of India, AgriculturalDevelopment Branch, Haveri in the style of Shukla Yajurveda Sammelan 1978 to be operated by any two of the following.

President
General Secretary
Treasurer

The President shall have the powers to form committee, sub-committee and authorised to take all the decesions in regards to the Sammelan of 1978 and to do all the acts for the benifit of the Sammelan.

[illegible]

[illegible] ಸಭೆಗೆ ಹಾಜರಿದ್ದ ಮಹನೀಯರು

| ನಂ | ಹೆಸರು | ಸಹಿ. | ಪೂರ್ತಿ ವಿಳಾಸ |
|---|---|---|---|
| (1) | ಶ್ರೀ [illegible] | [illegible] | |
| (2) | ಶ್ರೀ [illegible] | [illegible] | |
| (3) | ಶ್ರೀ [illegible] | [illegible] Biradar | |
| 4 | [illegible] | [illegible] | |
| 5 | S. G. Pathak Bankapur | [illegible] | 134, [illegible] Hubli. |
| 6 | G. K. Joshi | [illegible] | Retired [illegible] Vittal [illegible] Chowk, Bijapur |
| 7 | Shri. A. B. Deshpande. | [illegible] | P. D. J. High. School 'B' BIJAPUR |
| 8 | [illegible] | | |
| 9) | [illegible] | [illegible] | [illegible] Haveri. |
| 10 | G R Hav[illegible] | G.R.H[illegible] | [illegible] (PWD) |
| 11 | S. N. Rajapurohit | S N R | |
| 12 | R G Chakravarti | [illegible] | Head Master [illegible] Model School [illegible] Dharwar |
| 13 | [illegible] | [illegible] | |
| 14 | N B K[illegible] | [illegible] | [illegible] Hubli |
| 15 | P. [illegible] | [illegible] | [illegible] |
| 16. | V J Kulkarni | [illegible] | [illegible] Galli Haveri |
| 17 | [illegible] | [illegible] | [illegible] |
| 18. | S. K. Madiger. | [illegible] | At, Post: Agadi |
| 19. | V. G. Havan[illegible] | [illegible] | At, Post: Agadi. |
| 20. | H G Chakravarthi | [illegible] | At, Post: Agadi. |
| 21. | C. L. Kulkarni | K[illegible] | [illegible] |
| 22 | [illegible] | [illegible] | [illegible] Galli Haveri |
| 23 | H. V Pujar | [illegible] | Postman Haveri |
| 24 | M. S. Bahadur Desai | M S B Desai | post Agadi T: Haveri D: Dharwar |

| | | | |
|---|---|---|---|
| 25) | [illegible] | [illegible] | L I C of India [illegible] |
| 26) | [illegible] | [illegible] | [illegible] |
| 27) | N. G. Kulkarni | N. G. [illegible] | [illegible] |
| 28) | C H [illegible] | [illegible] | |
| 29) | C. K Kulkarni | Kulkarni | Haveri. |
| 30) | S K Rajpurohit | [illegible] | [illegible] |
| 31) | B J Kulkarni | [illegible] | [illegible] |
| 32) | D M Kulkarni | [illegible] | [illegible] |
| 33) | [illegible] | [illegible] | A J Patil, [illegible] |
| 34) | V G Shadambi | [illegible] | [illegible] |
| 35) | R N Patil | [illegible] | [illegible] |
| 36) | S H Kulkarni | [illegible] | [illegible] |
| 37) | H G Kulkarni | [illegible] | S.D.O. H.B.L. Photocopy [illegible] [illegible] Dharwad |
| 38) | [illegible] | [illegible] | |
| 39) | S N Kapur | [illegible] | [illegible] Haveri |
| 40) | C K [illegible] | [illegible] | |
| 41 | R.K. Kulkarni | [illegible] | R.K. Kulkarni C/o S.H. [illegible] Haveri. |
| 42 | [illegible] | [illegible] | [illegible] |
| 43 | B Desai [illegible] | B Desai | Bombay |

# ...ಮೇರಿಕೆ ಸಂಬಂಧ
# ...ರಣೆಗೆ ಸ್ವಾಗತ

# ರನ್ನನ ಕಾವ್ಯ

(ಪ್ರೇಷಿತ ಪ್ರತಿನಿಧಿಯಿಂದ)

ಮುಧೋಳ, ೧೬– ರನ್ನನ ಕಾವ್ಯ ಕಬ್ಬಿಣದ ಕಡಲೆಯಲ್ಲ. ನಿಜವಾದ ಕಡಲೆಗಳು. ಇದರ ಸವಿ ತಿಳಿಯಬೇಕಾದರೆ ಗಟ್ಟಿಮುಟ್ಟಾದ ಹಲ್ಲುಗಳು ಬೇಕು ಎಂದು ಮಾಜಿ ಶಾಸಕ ಶ್ರೀ ಕೆ. ಪಿ. ನಾಡಗೌಡ ಅವರು ಇಲ್ಲಿ ತಿಳಿಸಿದರು.

ಅವರು ಮೊದಲ ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ರನ್ನನ ಬಗ್ಗೆ ಸಂಶೋಧನ ಪ್ರಬಂಧಗಳನ್ನು ಪಂಡಿತರು ಮುಧೋಳದಲ್ಲಿ ಓದುವಂತೆ ಕನ್ನಡ ಸಾಹಿತ್ಯ ಪರಿಷತ್ತಿನವರು ಮಾಡಿದ್ದಾರೆ. ಆದರೆ ಪಟ್ಟಣವನ್ನು ತಿಳಿಯದ ಸಾಮಾನ್ಯರ ಮುಂದೆ ಸಂಶೋಧನ ಪ್ರಬಂಧ ಮಂಡಿಸುವುದು ಎಷ್ಟರ ಮಟ್ಟಿಗೆ ಉಚಿತ ಎನ್ನುವುದು ಆಲೋಚಿಸಬೇಕಾದ ವಿಷಯ ಎಂದರು. ರನ್ನ ಮುಧೋಳದವನಾದರೂ ಇಲ್ಲಿ ಎಲ್ಲರೂ ರನ್ನನಂತೆ ಪಂಡಿತರಲ್ಲ ಆದರೆ ಎಲ್ಲರೂ ರನ್ನನ ಪ್ರತೀಕಗಳಾಗಬೇಕು ಎಂಬುದು ವಿಚಾರಸಂಕಿರಣದ ಆಶಯ ಎಂದರು.

ಶ್ರೀ ಎಸ್. ಪಿ. ಪಾಟೀಲ ಅವರು ಅಜಿತನಾಥ ಪುರಾಣ ಮತ್ತು ಆದಿನಾಥ ಪುರಾಣ ಕುರಿತು ಮಾತನಾಡಿ ಆದಿನಾಥ ಪುರಾಣದ ದಟ್ಟ ಛಾಯೆಯಲ್ಲಿ ಬೆಳೆದ ಅಜಿತನಾಥ ಪುರಾಣ ಸತ್ಕೃತಿ ಎಂದರು. ಸಗರ

## ಸತ್ಯ ಕಂಡುಹಿಡಿದು ವರದಿ ಮಾಡಲು ಕರೆ

ಮುಧೋಳ ೧೬– ಯಾವುದು ಸುಳ್ಳು, ಯಾವುದು ನಿಜ ಎಂಬುದನ್ನು ಸಂಶೋಧನೆ ನಡೆಸಿ ಪ್ರಕಟಿಸಿ ಜನರ ವಿಶ್ವಾಸವನ್ನು ಉಳಿಸಿಕೊಳ್ಳಿ ಎಂದು ರಾಜ್ಯದ ಕೇಂದ್ರ ಗ್ರಂಥಪಾಲಕ ಶ್ರೀ ಎಸ್. ಡಿ. ಬಗರಿ ಅವರು ಪತ್ರಕರ್ತರಿಗೆ ಸಲಹೆ ಮಾಡಿದರು.

ಇಲ್ಲಿಯ ಶಾಂತಿನಾಥ ಸಭಾಂಗಣದಲ್ಲಿ "ರನ್ನ ಪ್ರಶಸ್ತಿ" ಗ್ರಂಥವನ್ನು ಬಿಡುಗಡೆ ಮಾಡುತ್ತ ಮಾತನಾಡಿದ ಅವರು "ವ್ಯಾಸಂಗಿಕವಾದರೂ ನಾನು ಮಾತನ್ನು ಇಲ್ಲಿ ಹೇಳಿಸಿಕೊಂಡ ಸಾಹಿತಿಗಳಿಗೆ ಇಲ್ಲಿ [illegible]

---

---

## ಇದನ್ನು ಕತ್ತರಿಸಿ ಇಟ್
## ...ಲವು ವರ್ಷಗಳಲ್ಲೇ ಇದು
## ಬೀಳಬಹುದ

...ೇ ಯಾವ ಕೆಲಸವೂ ಆಗದು.
...ಗಳಲ್ಲೇ ಇದರ ಅಭಾವ ಉಂಟಾಗ

...ಿವಡ ಕೊರತೆ ನಮಗೆಲ್ಲರಿಗೂ
...ರ ಸಮಯವನ್ನು ಕೊಂಚ
...ಾನ ಪತ್ರಿಕೆಗಳು ತೆಳ್ಳಗಾಗಿಯೂ,
...ಬವಾಗಿಯೂ ಹೊರಬೀಳುತ್ತಿದ್ದುದು
...ಶಾಲೆಗಳು ಆರಂಭವಾಗುವ ಸಮಯ
...ಕ ಅಂಗಡಿಗಳ ಎದುರು
...ಕಾಯುತ್ತಿರುವುದು ನೋಡಿಲ್ಲವೇ?
...ಿ ಮಾತ್ರವಲ್ಲ, ಮುಖದ
...ವಿಳ ಸಮಯದಲ್ಲೂ ಕಾಳಷ್ಟು
...ಾರಳದು. ವಿಶೇಷಜ್ಞರ ಹೇಳಿಕೆ
...ಕಾಗದದ ಬರಗಾಲ

...ಆಲೋಚಿಸಬೇಕಾಗಿದೆ. ಅದು

**ಪೇಪರ್‌ನ ಭೂಮಿಕೆ**

ಸಾಗಾಲ...
ಕಾಗದ...
ಮುಂದ...
ಅದನ್...
ಇವೆಲ್ಲವ...
ಭಾರತ...
3,00,00...
ಕಾಗದ...
ಹೆಚ್ಚಿಸು...

ವಿಕ್ರಯ...
ತನೂ...
ಅದು...

ದೇಶದ...
ಅಭಾವ...
ಮಾಡ...

ಪ್ರಜಾವಾಣಿ
೨ 11. 1978
Thursday

# ಅಗಡಿಯಲ್ಲಿ ಅಖಿಲಭಾರತ ಶುಕ್ಲ ಯಜುರ್ವೇದ ಸಮ್ಮೇಳನ ವ್ಯವಸ್ಥೆ

ಹುಬ್ಬಳ್ಳಿ, ನ. ೧— ಕಾಣ್ವ ಪರಿಷತ್ ಆಶ್ರಯದಲ್ಲಿ ಡಿಸೆಂಬರ್ ೨೪ ಮತ್ತು ೨೫ ರಂದು ಹಾವೇರಿ ತಾಲ್ಲೂಕಿನ ಆನಂದವನದಲ್ಲಿ (ಅಗಡಿ) ಅಖಿಲ ಭಾರತ ಶುಕ್ಲ ಯಜುರ್ವೇದ ಸಮ್ಮೇಳನ ನಡೆಯಲಿದೆ.

ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಎನ್. ಸಿ. ದೇಸಾಯಿ ಅವರು ಈಚೆಗೆ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಈಗ ಉತ್ತರ ಭಾರತ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಕರ್ನಾಟಕಗಳಲ್ಲಿ ಹಂಚಿಹೋಗಿರುವ ಕಾಣ್ವ ಸಮಾಜದವರನ್ನು ಒಟ್ಟುಗೂಡಿಸುವುದೇ ಈ ಸಮ್ಮೇಳನದ ಉದ್ದೇಶವಾಗಿದೆಯೆಂದರು.

ಕಾಣ್ವ ಸಮಾಜದ ಡೈರೆಕ್ಟರಿ, ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು, ವಿವಾಹ ಹಾಗೂ ಸಮಾಜದ ಇತರ ಸಾಮಾಜಿಕ ಸಮಸ್ಯೆಗಳ ಕುರಿತು ಸಮ್ಮೇಳನ ಚರ್ಚಿಸಲಿದೆಯೆಂದು ಅವರು ಹೇಳಿದರು.

ಶ್ರೀ ಶೇಷಾಚಲ ಜಗದ್ಗುರುಗಳ ಆವಾಸ ಕ್ಷೇತ್ರವಾದ ಅಗಡಿಯಲ್ಲಿ ಏಳು ದಶಕಗಳ ಹಿಂದೆ ಇಂಥದೇ ಸಮ್ಮೇಳನ ನಡೆದುದನ್ನು ಅವರು ಸ್ಮರಿಸಿದರು.

ಶೃಂಗೇರಿಯ ಶ್ರೀ ಶಂಕರಾಚಾರ್ಯ, ಹುಣಸಿಹೊಳೆ ಕಾಣ್ವಮಠದ ಶ್ರೀ ವಿದ್ಯಾತಪೋನಿಧಿ ಸ್ವಾಮೀಜಿ, ಮುರಗೋಡ ಹಾಗೂ ಚಿದಂಬರ ನಗರಗಳ ಸ್ವಾಮೀಜಿಗಳು, ಬಸವಾಪಟ್ಟಣದ ಶ್ರೀ ರಾಘವೇಂದ್ರ ಸ್ವಾಮೀಜಿ ಅವರು ಆಗಮಿಸಲಿದ್ದಾರೆಂದು ಅವರು ತಿಳಿಸಿದರು.

ಸೀತಾರಾಮ ನಾಯಕ್ ಬಾದಾಮಿ ಅವರ ನೇತೃತ್ವದಲ್ಲಿ ರಚಿತವಾಗಿರುವ ಸ್ವಾಗತ ಸಮಿತಿ ಸಮ್ಮೇಳನಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತಿದೆ. ರಾಷ್ಟ್ರಾದ್ಯಂತದಿಂದ ಸುಮಾರು ೩ ಸಾವಿರ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಸ್ವ.ಸು.

## ಥಾಯ್‌ಲೆಂಡಿಗೆ ಪ್ರಯಾಣ

KANVA PARISHAT

ALL INDIA

# SHUKLA YAJURVEDA SAMMELAN 1978

ANANDVAN-AGADI, TALUKA: HAVERI, DISTRICT: DHARWAR. (KARNATAKA)

Date :

Cash from CSR

1000 : 00
1500 : 00
2300 : 00
1500 : 00

5300 : 00

ಲ ಸದ್ಗುರು
ಸಂಸ್ಕೃತ ಪಾಠಶಾಲ
ಭವನ-ಅಗಡಿ

# ನೂತನ ಕಟ್ಟಡ ನಿರ್ಮಾಣ

೮೦ ವರ್ಷಗಳ ವೇದಶ್ರೀಯ ಸೇವಾ ಸ್ಮೃತಿ

ಶ್ರೀ ಚಿದಂಬರ ಮಹಾಸ್ವಾಮಿಗಳು.

ಶ್ರೀ ಸದ್ಗುರು ಶೇಷಾಚಲ ಮಹಾರಾಜರು.

ಶ್ರೀ

ಸಚ್ಛಾತ್ರ ವೃಂದೈಃ ಪರಿಸೇವಿತಾಂಘ್ರಿಂ । ನಾರಾಯಣಾದ್ಯೈಃ ರಸಿಕಂಕೃಪಾಲುಂ ।
ಭವಾವತಾರಂ ಭವತಾಪನಾಶಂ । ಶೇಷಾಚಲಂ ತಂ ಹೃದಿ ಭಾವಯಾಮಿ ।

### ಸದ್ಭಕ್ತರಲ್ಲಿ ಸವಿನಯ ಪ್ರಾರ್ಥನೆ

ಸನ್ ೧೯೦೭ರಲ್ಲಿ ಶ್ರೀ ಶೇಷಾಚಲ ಸದ್ಗುರು ಚತುರ್ವೇದ ಸಂಸ್ಕೃತ ಪಾಠಶಾಲೆ ಪ್ರಾರಂಭವಾಯಿತು. ಅಂದರೆ ಅಂದಿನಿಂದ ಇಂದಿನವರೆಗೆ ೮೦ ವರ್ಷಗಳ ದೀರ್ಘ ಸಮಯದವರೆಗೆ, ಈ ಪಾಠಶಾಲೆ ವೇದರಕ್ಷಣೆ, ಧರ್ಮರಕ್ಷಣೆಯನ್ನು ಮಾಡುತ್ತ ಬಂದಿದೆ. ಅಂದು ನೂರಾರು ವಟುಗಳು ವೇದಾಧ್ಯಯನ ಮಾಡುತ್ತಿದ್ದರು. ಆದರೆ, ಇಂದು ಕಾಲಮಾನಕ್ಕನುಸರಿಸಿ ೧೯ ಹುಡುಗರು ವೇದಾಧ್ಯಯನ ಮಾಡುತ್ತಿದ್ದು, ಇನ್ನೂ ನಾಲ್ಕಾರು ಬಾಲಕರಿಗೆ ಪ್ರವೇಶಾನುಕೂಲವಿದೆ. ಹನ್ನೆರಡು ವರ್ಷ ಪೂರ್ಣ ವೇದಾಧ್ಯಯನಮಾಡಿ ಘನಾಂತ ಪೂರೈಸಬೇಕೆಂಬ ಕಟ್ಟಳೆಯಿಂದ ಪಾಠ ನಡೆಯುತ್ತಿದೆ. ವೇದ ಹಾಗೂ ಸಂಸ್ಕೃತ ಅಧ್ಯಾಪನ ಮಾಡಿಸಲು ಪ್ರತ್ಯೇಕವಾಗಿ ಇಬ್ಬರು ಗುರುಗಳಿದ್ದು ಹಿಂದಿನ ಋಷ್ಯಾಶ್ರಮದಂತೆ ಸದಾವೇದ ಶಾಸ್ತ್ರಾಧ್ಯಯನ ನಡೆಯುತ್ತಿವೆ. ಸರಕಾರ ಅಥವಾ ಯಾವುದೆ ಒಂದು ಸಂಸ್ಥೆಯಿಂದ ಸಹಾಯ ಯಾಚಿಸದಂತೆ ಕೇವಲ ತಮ್ಮಂಥ ಭಕ್ತರ ಸಹಾಯ ಸಹಕಾರಗಳಿಂದ ವಿದ್ಯಾರ್ಥಿಗಳ ಅಶನ, ವಸನ, ವಸತಿ ಸೌಕರ್ಯಗಳಲ್ಲದೆ ಉಪಾಧ್ಯಾಯರ ಸಂಬಳ ಮುಂತಾದ ಎಲ್ಲ ಕಾರ್ಯ ನಡೆಯುತ್ತಿವೆ.

ಆನಂದವನದಲ್ಲಿ ಎಂಬತ್ತು ವರ್ಷಗಳ ಕಾಲ ವೇದಾಧ್ಯಯನ ಅಧ್ಯಾಪನ ನಡೆದರೂ ಪಾಠಶಾಲೆಗೆಂದೇ ಸ್ವತಂತ್ರ ಹಾಗೂ ಯೋಗ್ಯವಾದ ಸರ್ವ ಸೌಕರ್ಯಗಳುಳ್ಳ ಪ್ರತ್ಯೇಕ ಕಟ್ಟಡವಿಲ್ಲ. ವೇದಾಧ್ಯಾಯಿ ವಟುಗಳು ಒಂದೆಡೆ ಕುಳಿತು, ವೇದ-ಸಂಸ್ಕೃತ ಮನನ ಮಾಡಲು ಯೋಗ್ಯ ಸ್ಥಳವಿಲ್ಲ. ಇದುವರೆಗೆ ಅನೇಕ ಭಕ್ತರು ನೀಡಿದ ಅತ್ಯುತ್ತಮ ಅಮೂಲ್ಯ ಗ್ರಂಥಗಳನ್ನು ಸಂಗ್ರಹಿಸಿಡಲು ಉತ್ತಮ ಮಟ್ಟದ ಪ್ರತ್ಯೇಕ ಗ್ರಂಥಾಲಯದ ಕಟ್ಟಡವಿಲ್ಲ. ವಿದ್ಯಾರ್ಥಿಗಳಿಗೆ ಬಿಡುವಿನ ವೇಳೆಯಲ್ಲಿ ವಿಶ್ರಾಂತಿಗಾಗಿ ತಕ್ಕ ಕೊಠಡಿಗಳಿಲ್ಲ.

ಈ ಎಲ್ಲ ಕೊರತೆಗಳನ್ನು ನೀಗಿಸಿ ಹಿಂದಿನ ಗುರುಕುಲ ಪದ್ಧತಿಯಂತೆ ಗುರುಶಿಷ್ಯರು ಒಂದೆಡೆ ಸೇರಿ ಅಧ್ಯಯನ ಅಧ್ಯಾಪನ ಮಾಡಲು ಯೋಗ್ಯ ಸ್ಥಳಾವಕಾಶವುಳ್ಳ ನವೀನ ಪಾಠಶಾಲಾ ಕಟ್ಟಡದ ನಕ್ಷೆ ಈಗ ಸಿದ್ಧವಾಗಿದೆ. ಆರ್ಥಿಕ




ಪಾಠಶಾಲೆ ಕಟ್ಟಡದ ನೀಲಿನಕ್ಷೆ.

ಆನಂದವನದಲ್ಲಿ ನೂತನ ಪಾಠಶಾಲೆಯ ಕಟ್ಟಡ ಯಾವಭಾಗದಲ್ಲಿ ನಿರ್ಮಾಣವಾಗುವದೆಂದು ತೋರಿಸುವ ಚಿತ್ರಕಾರನ ಕಲ್ಪನೆಯ ನಕ್ಷೆ.

ಅನುಕೂಲತೆಯಾದಾಗ ಮತ್ತೆ ಮೂ... ಶಾಸ್ತ್ರಾಧ್ಯಯನ ನಡೆಯುವಂತೆ ಸ್ಥಳಾವಕಾಶವಿದೆ. ಶ್ರೇಷ್ಠ ಮಟ್ಟ... ಕಲ್ಲು, ಸಿಮೆಂಟು, ಕಬ್ಬಿಣ ಉಪಯೋಗಿಸಿ ಅನೇಕ ಶತಮಾನಗಳವರೆಗೆ ಕಟ್ಟಡ ಶಾಶ್ವತವಾಗಿ ನಿಲ್ಲುವಂತೆ ಮಾಡಲು ಸರ್ವ ಸಿದ್ಧತೆ ನಡೆದಿದೆ. ಮೂರು ಭಾಗದಲ್ಲಿ ನಿರ್ಮಾಣಗೊಳ್ಳಲಿರುವ ಈ ನವೀನ ಪಾಠಶಾಲಾ ಕಟ್ಟಡದಲ್ಲಿ ವಿದ್ಯಾರ್ಥಿಗಳು ವಾಸಿಸಲು ಹನ್ನೆರಡು ಖೋಲಿಗಳಿವೆ. "ಏಕಸ್ತಪೋ ದ್ವಿರಧ್ಯಾಯೀ" ಎಂಬ ಉಕ್ತಿಯಂತೆ ಪ್ರತಿ ಕೊಠಡಿಯಲ್ಲಿ ಒಂದೇ ತರಗತಿಯಲ್ಲಿ ಓದುವ ಇಬ್ಬರು ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ ಕಲ್ಪಿಸಲಾಗುವುದು. ಎಲ್ಲ ಕೊಠಡಿಗಳೂ ೧೦' × ೧೦' ಚಚ್ಚೌಕಾರದಲ್ಲಿದ್ದು ಪ್ರತಿಯೊಂದು ಖೋಲಿಯ ವೆಚ್ಚ ಹತ್ತು ಸಾವಿರ ರೂಪಾಯಿಗಳಾಗಬಹುದೆಂದು ಅಂದಾಜಿದೆ. ಈ ಕೆಳಕಂಡ ಹನ್ನೆರಡು ಜನ ಸದ್ಗುರು ಸದ್‌ಭಕ್ತರು ಈ ಕೊಠಡಿಗಳ ಸಂಪೂರ್ಣ ಸೇವೆಯನ್ನು ಸಲ್ಲಿಸಲು ಸಿದ್ಧರಾಗಿದ್ದಾರೆ:

೧. ಶ್ರೀ ನಾರಾಯಣರಾವ್ ಮುಧೋಳೆ, ನರಗುಂದ.
೨. ಶ್ರೀಮತಿ ಸುಭದ್ರಾಬಾಯಿ ನಾರಾಯಣರಾವ್ ಕುಲಕರ್ಣಿ, ಬ್ಯಾಡಗಿ.
೩. ಶ್ರೀ ಪೆಂಡಕೂರ ಶೀನಪ್ಪ, ಹರಪನಹಳ್ಳಿ.
೪. ಶ್ರೀಮತಿ ರುಕ್ಮಿಣೀಬಾಯಿ ಭೀಮಭಟ್ಟ ಜೋಯಿಸ್, ಹಾನಗಲ್ಲ.
೫. ಶ್ರೀ ತಿಮ್ಮಾಜಿ ಸುಬ್ಬಾಜಿ, ನಾಡಿಗೇರ ಗುತ್ತಲ.
೬. ಶ್ರೀ ಬಿ.ವಿ. ರಾಮರಾವ್, ಬೆಂಗಳೂರು.
೭. ಶ್ರೀ ಅನಂತಾಚಾರ್ಯ, ಪುಟ್ಟಾಚಾರ್ಯ ನಗರ, ಬೆಂಗಳೂರು.
೮. ಶ್ರೀಮತಿ ಪದ್ಮಾವತಮ್ಮ ರಾಮಾಜೋಯಿಸ್, ವರ್ಲಗೋಡ ಜಿ. ಶಿವಮೊಗ್ಗ.
೯. ಶ್ರೀ ರಂಗನಗೌಡ ಬಹದ್ದೂರ ದೇಸಾಯಿ (ಅಗಡಿ) ಧಾರವಾಡ.
೧೦. ಶ್ರೀ ಎಲ್.ಸಿ. ಕುಲಕರ್ಣಿ ಬ್ಯಾಡಗಿ.
೧೧. ಶ್ರೀ ಶಂಕರರಾವ್ ಬಿಂದುರಾವ್ ಪವಕಿ, ಸವದತ್ತಿ.
೧೨. ಶ್ರೀ ವೆಂಕಟೇಶ ದತ್ತಾತ್ರೇಯ ದಿವೇಕರ, ದಯಾಬಿಲ್ಡಿಂಗ್ಸ್, ಹುಬ್ಬಳ್ಳಿ.

ಈ ಕೊಠಡಿಗಳ ಮೇಲ್ಭಾಗದಲ್ಲಿ ೭೮ ಅಡಿ ಉದ್ದ ಹಾಗೂ ೧೧ ಅಡಿ ಅಗಲದ ಮಹಡಿಯನ್ನು ಯೋಜಿಸಿದೆ. ಅದರಲ್ಲಿ ಮೂರುಭಾಗಗಳು ಮೊದಲ ಭಾಗದಲ್ಲಿ (ದಕ್ಷಿಣಕ್ಕೆ) ೧೮' × ೧೧' ಆಕಾರದ "ಪಾಠಶಾಲೆಯ ಕಾರ್ಯಾಲಯ" ಬರುತ್ತದೆ. ಈ ಕಟ್ಟಡಕ್ಕೆ ಹದಿನೈದು ಸಾವಿರ ರೂಪಾಯಿಗಳು ಬೇಕೆಂದು ಅಂದಾಜಿದೆ. ಈ ಸೇವೆಯನ್ನು ಪಾಠಶಾಲಾ ಗೌರವ ಕಾರ್ಯದರ್ಶಿ ಶ್ರೀ ದುಗ್ಗವತ್ತಿ ಅನಂತರಾವ್ ದಾವಣಗೆರೆ ಇವರು ವಹಿಸಿಕೊಂಡಿದ್ದಾರೆ. ಮಹಡಿಯ ಉತ್ತರ ಭಾಗಕ್ಕೆ ೩೦' × ೧೧' ವಿಶಾಲವಾದ ಸ್ಥಳ ಗ್ರಂಥಾಲಯಕ್ಕೆಂದು ಮೀಸಲಾಗಿದೆ. ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮಿಕ್ಕಿ ಇದರ ನಿರ್ಮಾಣಕ್ಕೆ ವೆಚ್ಚ ತಗಲಬಹುದೆಂದು ವಿಚಾರವಿದೆ. ಬೆಂಗಳೂರು ವಾಸಿ ಗುರುಭಕ್ತ ಶ್ರೀ ಕೆ.ಎಲ್. ನಾರಾಯಣರಾಯರ ಮಕ್ಕಳು ಶ್ರೀ ಕೆ.ಎಲ್. ನಾಗರಾಜರಾವ್ ಇವರು ಈ ಗ್ರಂಥಾಲಯದ ಸಂಪೂರ್ಣ ಸೇವೆ ಸಲ್ಲಿಸಲು ಮುಂದೆ ಬಂದಿದ್ದಾರೆ. ಇವೆರಡು ಖೋಲಿಗಳ ಮಧ್ಯದಲ್ಲಿ ವೇದ ಪಾಠ ನಡೆಯುವ ಸ್ಥಳ ಅಥವಾ "ಕ್ಲಾಸ್‌ರೂಮ್" ಬರುತ್ತದೆ. ೪೦' × ೧೧' ಭವ್ಯಾಕೃತಿಯಲ್ಲಿ ಈ ಕೊಠಡಿ ವಿಶಾಲವಾಗಿ ವ್ಯಾಪಿಸಿದೆ. ಗದಗ ವಾಸಿಯಾಗಿರುವ ಶ್ರೀ ಗುರುನಾಥ ಬಾಳಿಹಳ್ಳಿ, ಶಿಕ್ಷಕ ದಂಪತಿಗಳು ತಮ್ಮ ತಂದೆ ದಿ. ಹನುಮಂತ ಭಟ್ಟ ಬಾಳಿಹಳ್ಳಿ ಇವರ ಹೆಸರಿನಲ್ಲಿ ಇಪ್ಪತ್ತೈದು ಸಾವಿರ ರೂಪಾಯಿಗಳ ಸೇವೆಯನ್ನು ಈ ಕೊಠಡಿಗಾಗಿ ಕೊಡಲು ಒಪ್ಪಿದ್ದಾರೆ.

ನವೀನವಾಗಿ ನಿರ್ಮಾಣಗೊಳ್ಳಲಿರುವ ಪಾಠಶಾಲಾ ಕಟ್ಟಡದ ಮುಖ್ಯ ಭಾಗವೆಂದರೆ "ಸಭಾಂಗಣ". ಇಲ್ಲಿ ಪಾಠಶಾಲಾ ವಿದ್ಯಾರ್ಥಿಗಳಿಗೆ ಪ್ರತಿ ಪಕ್ಷ ನೆರವೇರಿಸುವ ಶಾರದಾ ಪೂಜೆ, ವಿದ್ವಾಂಸರುಗಳಿಂದ ಆಗಾಗ್ಗೆ ಪ್ರವಚನ ಮುಂತಾದ ವಿದ್ಯಾಭಿವೃದ್ಧಿ ಕಾರ್ಯಗಳಿಗೆ ಅನುಕೂಲವಾಗುವಂತೆ ಸಭಾಮಂಟಪದ ವಿನ್ಯಾಸವಿದೆ. ಶ್ರೀಕ್ಷೇತ್ರ ಆನಂದವನದಲ್ಲಿ ಆಗಾಗ್ಗೆ ಅನೇಕ ಕಾರ್ಯಕ್ರಮಗಳು ನಡೆಯುತ್ತವೆ. ಆದರೆ ಗಾಳಿ, ಮಳೆ, ಬಿಸಿಲಿನಿಂದ ರಕ್ಷಣೆ ಪಡೆದು, ಹೆಚ್ಚು ಜನ ಒಂದಡೆ ಕುಳಿತು ಕಾರ್ಯಕ್ರಮ ವೀಕ್ಷಿಸಲು ಸಭಾಂಗಣವಿಲ್ಲ. ಚಿಕ್ಕಪುಟ್ಟ ಮದುವೆ-ಮುಂಜಿವೆ ಮಂಗಲಕಾರ್ಯ ಮಾಡಲೂ, ಜಯಂತ್ಯೋತ್ಸವ ಆರಾಧನೆ ಮುಂತಾದ ಸಂದರ್ಭಗಳಲ್ಲಿ ಪುರಾಣ-ಹರಿಕತೆ ನೆರವೇರಿಸಲೂ ಯೋಗ್ಯವಾಗಬಲ್ಲ ೫೦ ಅಡಿ ಉದ್ದ ೨೫ ಅಡಿ ಅಗಲ ವಿಸ್ತಾರದ, ವಿಶಾಲವಾದ, ಸುಂದರವಾದ "ಸಭಾಂಗಣ" ನಿರ್ಮಾಣಗೊಳ್ಳಲಿದೆ. ಒಂದು ಲಕ್ಷ ರೂಪಾಯಿಗೆ ಮಿಕ್ಕಿ ಹಣ ಇದಕ್ಕೆ ಬೇಕೆಂದು ತಜ್ಞರು ಅಂದಾಜು ಮಾಡಿದ್ದಾರೆ. ಈ ಕಟ್ಟಡದ ಭಾಗಶಃ ಸಹಾಯಕ್ಕೆ ಸದ್ಗುರು ಸದ್ಭಕ್ತರಾದ ಹಾನಗಲ್ಲಿನ ಶ್ರೀ ವಾಮನರಾವ್ ನಾಡಿಗೇರ ಇವರು ತಾತ್ವಿಕವಾಗಿ ಒಪ್ಪಿದ್ದರು. ಆದರೆ ವಿಧಿ ವಿಲಾಸದಿಂದ ಅವರು ಅಕಾಲಿಕವಾಗಿ ಹೃದಯ ವಿಕಾರದಿಂದ ನಿಧನರಾದರು. ಆದರೂ ಅವರ ಧರ್ಮಪತ್ನಿ ಮಾತೊಶ್ರೀ ಪದ್ಮಾವತಿಬಾಯಿ ನಾಡಿಗೇರ ಇವರು ದಿ. ವಾಮನರಾಯರ ವೈಕುಂಠ ಸಮಾರಾಧನೆಯಂದು ಈ ಕಟ್ಟಡಕ್ಕಾಗಿ ಐವತ್ತು ಸಾವಿರ ರೂಪಾಯಿಗಳನ್ನು ಈಗಾಗಲೇ ಸಲ್ಲಿಸಿದ್ದಾರೆ!

ಸ್ನಾನಗೃಹದ ಖರ್ಚನ್ನು ನಿಚ್ಚವ್ವನಹಳ್ಳಿ ದಿ. ಪ್ರತಿಗಾರ ಚಿದಂಬರರಾಯರ ಮಕ್ಕಳಾದ ಡಾ॥ ಪಿ. ನಾಗರಾಜರಾವ್ ರೂಪನಗುಡಿ ಇವರು ವಹಿಸಿಕೊಂಡಿದ್ದಾರೆ. ಪಾಠಶಾಲಾ ಕಟ್ಟಡದ ನೆಲಕ್ಕೆ ಉತ್ತಮ ಹಾಸುಗಲ್ಲಿನ ಫರಸಿಯನ್ನು ಮಾಡಿಸುವ ಮಹತ್ವಪೂರ್ಣ ಸೇವೆಯನ್ನು ಹಿಂದೆ ಯರೆ ಹಂಚನಾಳ ಗ್ರಾಮದವರಾಗಿದ್ದು ಇಂದು ಕೊಪ್ಪಳದಲ್ಲಿ ನೆಲೆಸಿರುವ ಶ್ರೀ ವೆಂಕಟರಾವ್ ಗುಡಿ ಇವರು ಸಲ್ಲಿಸಲು ಸಿದ್ಧರಾಗಿದ್ದಾರೆ. ದಾನದಲ್ಲಿ 'ಜಲದಾನ'ದ ಸೇವೆ ಅತಿ ಮಹತ್ವವಾದದ್ದು. ಎತ್ತರದಲ್ಲಿ ನೀರನ್ನು ಸಂಗ್ರಹಿಸಿ ಪಾಠಶಾಲೆಯಲ್ಲಿ ನಲ್ಲಿಯ

ಪಾಠಶಾಲೆಯಲ್ಲಿ ವಿದ್ಯಾರ್ಜನೆ ಮಾಡುವ, ಮಾಡುತ್ತಿರುವ ವಿದ್ಯಾರ್ಥಿಗಳು ಹೋಮ ಹವನಗಳಾದ ಮಹಾನ್‌ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಅಂತಹ ಕಾರ್ಯಕ್ರಮದ ಚಿತ್ರ

...ಶ್ರೀಯುತ ಜೀವಣರಾವ್ ದೇಸಾಯಿಯವರು, ತಮ್ಮ ...ಯಲ್ಲಿ ಈ ವರ್ಷ ಬೆಳೆದ ಪೂರ್ಣ ಭತ್ತದ ಬೆಳೆಯನ್ನು ...ರುವರು.

...ಕಾರ್ಯಕರ್ತರಾಗಿ ಸರ್ವಶ್ರೀ ನಾರಾಯಣರಾವ್ ... ರೋಣ, ಎನ್.ಸಿ. ದೇಸಾಯಿ ಅಗಡಿ, ಎನ್.ಜಿ. ...ಬಿ. ಕುಲಕರ್ಣಿ, ಬಂಕಾಪೂರ ಹಾಗೂ ಎಸ್.ಎಸ್. ...ಲ್ಲದೆ ಇನ್ನೂ ಅನೇಕ ಗುರುಭಕ್ತರು ವಿವಿಧ ರೀತಿಯ ... ಮುಂದೆ ಬಂದಿದ್ದಾರೆ. ಸದ್ಗುರುವಿನ ಆನಂದವನ ...ದ ಸೇವೆ ಸಲ್ಲಿಸುತ್ತ ಬಂದಿರುವ ಶ್ರೀ ಶೇಷಾಚಲ ... ಕೊಟ್ಟೂರು ಕನವಳ್ಳಿಯ ಶ್ರೀ ಶೇಷಾಚಲ ದಿಂಡಿ ...ಯೋಜನೆಗಳೊಂದಿಗೆ ಸೇವೆ ಸಲ್ಲಿಸಲು ...

... ...ಇರುವ ಪಾಠಶಾಲೆಯಲ್ಲಿ ಈ ಕಟ್ಟಡಗಳಲ್ಲದೆ ... ...ಹಾಗೂ ೮೦ ಅಡಿ ಉದ್ದ ೧೧ ಅಡಿ ಅಗಲದ ...ಪ್ರಶಾಲೆ ಅಥವಾ (...) ವರಾಂಡಾ, ಸುತ್ತಲೂ ಶಿಲೆಗಲ್ಲಿನ ಕಂಪೌಂಡು ...ಲ್ಲದೆ ಶೌಚಗೃಹ, ಸ್ನಾನಗೃಹವುಗಳ ನಿರ್ಮಾಣಕ್ಕೆ ಒಂದು ಲಕ್ಷರೂಪಾಯಿಗೆ ಮಿಕ್ಕಿ ಇನ್ನೂ ಹಣ ಬೇಕಂಬ ಅಂದಾಜಿದೆ. ಈ ಕೊರತೆಯನ್ನು ಕಳೆಯಲು ತಮ್ಮಂತಹ ಭಕ್ತರಲ್ಲಿ ಯಾಚಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ದಾನ ಮಾಡಿದವರ ಹೆಸರನ್ನು "ಕಾಷ್ಠ ಫಲಕ"ದ ಮೇಲೆ ಬರೆಯಿಸುತ್ತೇವೆ. ಐದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ದಾನ ಮಾಡಿದವರ ಭಾವಚಿತ್ರ ಸಹಿತ ಹೆಸರು ಬರೆಯಿಸುತ್ತೇವೆ. ಅಲ್ಲದೇ ಕಟ್ಟಡ ಉದ್ಘಾಟನೆಯ ಸಮಾರಂಭ ಸಮಯದಲ್ಲಿ ಪ್ರಕಟವಾಗುವ ವಿಶೇಷ ಸ್ಮರಣಗ್ರಂಥದಲ್ಲಿ, ಇನ್ನು ಮುಂದೆ ಈ ರೀತಿಯ ಉದಾರ ಧನ ಸಹಾಯ ಮಾಡಿದವರ ಭಾವಚಿತ್ರ ಹಾಗೂ ಹೆಸರುಗಳನ್ನು ಪ್ರಕಟಿಸಲಾಗುವುದು.

ಇದೊಂದು ಸದ್ಗುರುನಾಥನ ಸೇವೆ. ವೇದಪುರುಷನ ಸೇವೆ. ಋಷಿ ಋಣದಿಂದ ತಾವು ಮುಕ್ತರಾಗಲು ಸದವಕಾಶ. "ವೇದ ಶ್ಶಿವೋ ಶ್ಶಿವೋ ವೇದಃ ವೇದಾಧ್ಯಾಯಿ ಸದಾಶಿವಃ" "ವೇದವೇ ಶಿವ, ಶಿವನೇ ವೇದ, ಸದಾ ವೇದಾಧ್ಯಯನ ಮಾಡುವವನೆ ಸದಾಶಿವ". ಅವನಿಗೆ ಸ್ವಗೃಹ ನಿರ್ಮಾಣ ಮಾಡುತ್ತಿದ್ದೇವೆ. ಇದು ಕೇವಲ ದೇವತಾ ಸ್ಥಾಪನೆಯಲ್ಲ. ಸದಾಶಿವರು ಸೃಷ್ಟಿಯಾಗುವ ಗೃಹ ನಿರ್ಮಾಣ. ತಾವು ಮುಕ್ತ ಹಸ್ತದಿಂದ ಪರಹಸ್ತದಿಂದ ಸೇವೆ ಸಲ್ಲಿಸಿ ಸಂಸ್ಕೃತಿ, ಸಂಸ್ಕಾರ ಶಾಶ್ವತವಾಗಿ ಉಳಿಯುವಂತೆ ಮಾಡಿ ಸದ್ಗುರು ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಯೋಜನೆ ಮಾಡಬೇಕೆಂದಿದ್ದೇವೆ. ಶ್ರೀ ಸದ್ಗುರುವಿನ ಜಯಂತ್ಯುತ್ಸವದ ಸಂದರ್ಭದಲ್ಲಿ ಪ್ರತಿವರ್ಷ ಹತ್ತು ಸಾವಿರ ಜನಕ್ಕೆ ಮಿಕ್ಕಿ ಜನ ಸೇರುತ್ತಾರೆ. ಆಗ ಬೇಸಿಗೆಯ ಕಾಲವಾದುದರಿಂದ ನೀರು ಎಷ್ಟು ಶೇಖರಿಸಿದರೂ ಕಡಿಮೆ. ಅಲ್ಲದೆ ಶ್ರೀ ಕ್ಷೇತ್ರ ಆನಂದವನ-ಅಗಡಿ ಹೆದ್ದಾರಿಗೆ ಅತಿ ಹತ್ತಿರವಿರುವುದರಿಂದ ಸದಾ ನೀರು ದೊರೆಯುವಂತೆ ಮಾಡಿದರೆ ದಾರಿಹೋಕರಿಗೆ "ಅರವಟ್ಟಿಗೆ"ಯಂತ ಕಾರ್ಯವಾಗುತ್ತದೆ. ಈ ಮಹಾನ್ ಪರಮಪಾವನ ಗಂಗಾ ಸಂಗ್ರಹಿಸುವ "ನೀರಿನ ಟ್ಯಾಂಕ್" ಸೇವೆಯನ್ನು ಅನೇಕ ದಾನಧರ್ಮ ಮಾಡಿ ಪ್ರಸಿದ್ಧಿ ಪಡೆದಿರುವ ಶ್ರೀ ರಟ್ಟಿಹಳ್ಳಿ ಕಾಂತಪ್ಪ ಶೆಟ್ಟಿ ಇವರ ಮಕ್ಕಳು ಶ್ರೀ ರಾಮಶ್ರೇಷ್ಠಿ ಇವರು ಮುಂದೆ ಬಂದಿದ್ದಾರೆ.

ಪಾಠಶಾಲೆಯಲ್ಲಿ ವಿದ್ಯುತ್ ಜೋಡಣೆಯೂ ಅಷ್ಟೇ ಅವಶ್ಯವಾದುದು. ವಿದ್ಯುತ್ ತಂತಿ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಜೋಡಣೆಯ ಸೇವಾಕಾರ್ಯವನ್ನು ಕನವಳ್ಳಿ ಗ್ರಾಮದ ಈಗ ಬೆಂಗಳೂರಿನಲ್ಲಿ "ಕನವಳ್ಳಿ ಎಲೆಕ್ಟ್ರಿಕಲ್ಸ್"ದ ಮಾಲೀಕರಾದ ಶ್ರೀ ಎಂ.ಎಸ್. ಕುಲಕರ್ಣಿ ಸಹೋದರರು ವಹಿಸಿಕೊಂಡಿರುವರು.

ಶ್ರೀಕ್ಷೇತ್ರ ಆನಂದವನ ಅಗಡಿ

ಯುಗಾದಿ ಪ್ರತಿಪದ
ದಿ. ೧೯-೩-೧೯೮೮

ಚಿದಂಬರಮೂರ್ತಿ ಚಕ್ರವರ್ತಿ

Design: N. C. DESAI Agadi and Printed & Produced by N. S. Joshi Agadi (Bangalore)

## ಶ್ರೀ ಶೇಷಾಚಲ ಸದ್ಗುರು ವೇದ ಸಂಸ್ಕೃತ ಪಾಠಶಾಲೆ

ಅಂಚೆ: ಆನಂದವನ, ತಾಲ್ಲೂಕ: ಹಾವೇರಿ, ಜಿ. ಧಾರವಾಡ.

## SHRI SHESHACHAL SADGURU VEDA SANSKRIT PATHASHALA

PO : ANANDVAN-581 128 Tal : HAVERI Dist : DHARWAR

# ಪುರಸಿದ್ಧಪ್ಪನ ಗುಡಿ

— ಎನ್. ವಿ. ದೇಸಾಯಿ

"ಹದ್ಬಾಳದ ಚಂದ್ರಿಕೆ" ಜೂನ ೧೯೯೯

ಹಾವೇರಿ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು - ೧

# ಹಾವೇರಿ: ಪುರಸಿದ್ದಪ್ಪನ ಗುಡಿ.

- ಚಿತ್ರ ಲೇಖನ: ಶ್ರೀ ಎನ್. ಸಿ. ದೇಸಾಯಿ.

ಸದ್ಬೋಧ ಚಂದ್ರಿಕೆ · ಜೂನ 1999

ಹಾವೇರಿಯ ಪುರಸಿದ್ದಪ್ಪನ ಗುಡಿಯ ನೆನಪಾದೊಡನೆ ನನ್ನ ಬಾಲ್ಯದ ದಿನಗಳ ಜ್ಞಾಪಕ ಧಾವಿಸಿ ಬರುತ್ತದೆ. ನಿಜ, ನಾನು ಹಾವೇರಿ ಹೈಸ್ಕೂಲಿನ ವಿದ್ಯಾರ್ಥಿಯಾಗಿರದಿದ್ದರೂ ಆ ಕಾಲದಲ್ಲಿ ಅಲ್ಲಿ ಚಿತ್ರಕಲಾ ಶಿಕ್ಷರಾಗಿದ್ದ ಶ್ರೀ ಕಾಳಪ್ಪ ಗುಡಿಸಾಗರ ಮಾಸ್ತರರು ಚಿತ್ರಕಲೆಯ ವಿಷಯವಾಗಿ ನನಗೆ ಅಚ್ಚುಮೆಚ್ಚಿನ ಗುರುಗಳಾಗಿದ್ದರು. ನನ್ನಲ್ಲಿ ಚಿತ್ರ ಕಲೆಯ ಅಭಿರುಚಿಯನ್ನು ಗುರುತಿಸಿದ ಅವರು ಅಲ್ಲಿ ವಿದ್ಯಾರ್ಥಿಗಳಾಗಿದ್ದ ನಮ್ಮೂರಿನ ಜನರ ಮೂಲಕ ನನ್ನನ್ನು ಕರೆಯಿಸಿ, ಇಲ್ಲವೇ ಅಗಡಿಯವರೆಗೂ ಬಂದು ನನ್ನಲ್ಲಿ ಆ ಎಳೆ ವಯಸ್ಸಿನಲ್ಲಿದ್ದ ಕಲೆಯ ಅಂಕುರಕ್ಕೆ ನೀರೆರೆದು ಬೆಳೆಸಿದವರು!

ಇಂಥಹ ಭೆಟ್ಟಿಯ ಸಂದರ್ಭದಲ್ಲಿ ಅವರು ಹಾವೇರಿಯಲ್ಲಿದ್ದ ಪುರುಸಿದ್ದಪ್ಪನ ಗುಡಿಯ ವಿಷಯವಾಗಿ ಬಹು ಅಭಿಮಾನದಿಂದ ಹೇಳುತ್ತಿದ್ದರು. ಅಲ್ಲಿಯ ಕುಸುರಿನ ನಕ್ಷೆ, ಚಿಕ್ಕಗಾತ್ರದಲ್ಲಿದ್ದರೂ ಅಲ್ಲಿಯ ಶಿಲಾಬಾಲಿಕೆ ನರ್ತಕಿಯರು, ವಾದ್ಯಗಾರರೂ, ಪಶುಪಕ್ಷಿಗಳು ಮುಂತಾದವುಗಳ ಬಗ್ಗೆ ವಿವರಿಸುತ್ತ ಒಂದು ರೀತಿಯಲ್ಲಿ ಮೈ ಮರೆಯುತ್ತಿದ್ದರು. ಅವರು ಅವುಗಳ ಮಾಟ, ಭಂಗಿ ಶಿಲ್ಪಕಾರನು ಕೆತ್ತಿದ ಮೂರ್ತಿಯ ಮೇಲಿನ ವಸ್ತ್ರ - ಒಡವೆಗಳ ಸೂಕ್ಷ್ಮತೆಗಳ ಬಗ್ಗೆ ಹೇಳುತ್ತಿದ್ದಂತೆ ನಾನೂ ಕನಸಿನ ಲೋಕಕ್ಕೆ ಹೋಗುತ್ತಿದ್ದೆ. ಆದರೆ ಆ ಕಾಲಕ್ಕೆ ಆ ಮಂದಿರವನ್ನು





ಹೋಗಿ ನೋಡುವ ಭಾಗ್ಯ ನನ್ನದಾಗಿರಲಿಲ್ಲ.
ಮುಂದೆ ಅರ್ಧ ಶತಮಾನವನ್ನೇ ದಾಟಿರಬೇಕು. ಇಷ್ಟು ದೀರ್ಘಕಾಲ ಕಳೆದರೂ ಗುಡಿಸಾಗರ
ಮಾಸ್ತರರು ಹಿಂದೆ ಹೇಳಿದ ಮಾತು ಸ್ಮೃತಿ ಪಟಲದಿಂದ ಅಳಿಸಿರಲಿಲ್ಲ. ಹಾವೇರಿಯಿಂದ ಆಗಡಿಗೆ
ಹೋಗುವಾಗ ಆ ನೆನಹುಗಳು ಭುಗ್ಗೆಂದು ಬರುತ್ತಿದ್ದವು. ಆದರೂ ಎಷ್ಟೋ ಕಾಲ ಗುಡಿಯವರೆಗೆ
ಹೋಗುವಾಗ ಆ ನೆನಹುಗಳು ಭುಗ್ಗೆಂದು ಬರುತ್ತಿದ್ದವು. ಒಮ್ಮೆ ಮುಂಬಯಿಯಿಂದ ಬರುವಾಗ ನಿರ್ಧಾರ ಮಾಡಿಯೇ
ಹೋಗುವ ತವಕವನ್ನೇ ತೋರಲಿಲ್ಲ. ಒಮ್ಮೆ ಮುಂಬಯಿಯಿಂದ ಬರುವಾಗ ನಿರ್ಧಾರ ಮಾಡಿಯೇ ತೀರುವದೆಂದು, ಸರಿ
ಹೊರಟೆ. ಈ ವಾಸ್ತವ್ಯದಲ್ಲಿ ಪುರಸಿದ್ದಪ್ಪನ ಗುಡಿಯ ದರ್ಶನ ಮಾಡಿಯೇ ತೀರುವದೆಂದು, ಸರಿ
ಬಂದದ್ದೂ ಆಯಿತು. ಗುಡಿಗೆ ಹೋದದ್ದೂ ಆಯಿತು........
ಒಂದು ಪ್ರದಕ್ಷಿಣೆ ಹಾಕಿದೆ ಸುತ್ತುತ್ತಿದ್ದಂತೆಯೇ, ಅಯ್ಯೋ ಎಂತಹ ತಪ್ಪು ಮಾಡಿದೆನಲ್ಲ ಎಂದು
ಪಶ್ಚಾತ್ತಾಪ ಉಕ್ಕುಕ್ಕಿ ಬರತೊಡಗಿತು. ಈ ಶಿಲ್ಪ ಸೌಂದರ್ಯದ ಸೊಬಗನ್ನು ಅನುಭವಿಸಲು ಎಷ್ಟು
ವಿಳಂಬ ಮಾಡಿದೆನಲ್ಲ ಎಂಬುದೇ ಆ ಪಶ್ಚಾತ್ತಾಪಕ್ಕೆ ಕಾರಣ, ನನ್ನ ಭಾವ ಇನ್ನು ತೀಕ್ಷ್ಣವಾಯಿತು.
ಗುಡಿಸಾಗರರು ಹೇಳಿದ ಮಾತಿನಲೆಲ್ಲ ಜೀವಕಳೆ ತುಂಬ ತೊಡಗಿತು. ನೃತ್ಯ ಬಾಲಿಕೆಯರು
ಕುಣಿಯತೊಡಗಿದರು. ಅವರ ನೂಪುರದ ಸದ್ದು ಪಸರಿಸಿತು. ವಾದ್ಯಗಳ ಝುಂಕಾರ ಕರ್ಣವನ್ನು
ತುಂಬಿದವು, ಸಂಗೀತದ ಸೊಬಗೇ ಸುತ್ತತೊಡಗಿತು. ವಾತಾವರಣವೆಲ್ಲ
ಸುಗಂಧಮಯವಾಯಿತು.......
ಕಣ್ಣು ಪಿಳುಕಿಸಿದಾಗ, ಸ್ವಪ್ನಲೋಕದಿಂದ ನಿಜ ಜೀವನಕ್ಕೆ ಮರಳಿದ್ದೆ, ನುಗು ಮಾಡಿದ್ದಾರೆ.
ಅವನ್ನು ನೋಡಿ ವಿಷಾದಿಸುವದೊಂದೇ ಸರಳ ಮಾರ್ಗ.
ಪುರಸಿದ್ದಪ್ಪನ ಗುಡಿಯು, ಹಾವೇರಿಯ ರೈಲು ನಿಲ್ದಾಣದಿಂದ ಬಸ್‌ಸ್ಟ್ಯಾಂಡಿಗೆ ಹೋಗುವ
ದಾರಿಯಲ್ಲಿ ಸ್ವಲ್ಪ ಅಂತರದಲ್ಲಿ ಎಡ ಬದಿಯಲ್ಲಿದೆ.

ಗೋಡೆ ಮತ್ತು ಪಾ ಕಾಲದಲ್ಲಿ [illegible] ಮೇಲಿದೆ. ಆ ಮೇಲೆ ಹೋಗಲು [illegible] ಕಾವಲುಗಾರನಿ[illegible] ಅಹುದು ಈಗ ಮಂದಿರವನ್ನು ಪ್ರಾಚ್ಯವಸ್ತು [illegible] ನೋಡುತ್ತಿರುವವರಿಂದ. ಕಸಗೂಡಿಸಿ ಸ್ವಚ್ಛ ಇಟ್ಟಿರುತ್ತಾರೆ. ಮೊನ್ನೆ ಮೊನ್ನೆ ನಾನು ಹೋದಾಗ್ಗೆ [illegible] ರಿಪೇರಿಯ ಕಾರ್ಯವೂ ನಡೆದಿತ್ತು. ಅದನ್ನು ಕಂಡು ನನಗೆ ಸಮಾಧಾನವಾಯಿತು. ಈ ಮಂದಿರ ಇನ್ನೂ ನಾಲ್ಕು ಶತಮಾನ ಬಾಳಬಹುದೆಂಬ ಭರವಸೆಯಾಯಿತು.

ಮಂದಿರದ ಒಳಗೆ ಭಾವಣಿಯಲ್ಲೂ ಮೂರ್ತಿಗಳಿವೆ. ಅಲ್ಲಿ ಕತ್ತಲು ಕವಿದಿತ್ತು. ಕಲ್ಲು ಕಪ್ಪು, ವಿದ್ಯುತ್ ದೀಪಗಳ ಅನಾನುಕೂಲತೆಯುಳ್ಳದ್ದರಿಂದ ಆ ಮೂರ್ತಿಗಳನ್ನು ನೋಡುವ ಭಾಗ್ಯ ನನ್ನದಾಗಿರಲಿಲ್ಲ. ಆದರೆ ಕೆಲ ಉತ್ತಮವಾದ ನೃತ್ಯಭಂಗಿಗಳೆಂಬ ಭಾಸವಾಯಿತು. ಇನ್ನೊಮ್ಮೆ ಹೋದಾಗ್ಗೆ ದೀಪಗಳ ವ್ಯವಸ್ಥೆ ಏನಾದರೂ ಇದ್ದರೆ ನೋಡಿ ಅವುಗಳ ಅಂದವನ್ನು ಅನುಭವಿಸಿ ನಿಮಗೂ ಅರುಹಲು ಪ್ರಯತ್ನಿಸುತ್ತೇನೆ.

**ಶಾಸನದ ಉಲ್ಲೇಖ**

ಹಾವೇರಿಯವರೇ ಆದ ಡಾ॥ ಶ್ರೀನಿವಾಸ ರಿತ್ತಿಯವರ ಪ್ರಕಾರ ಈ ದೇವಸ್ಥಾನ ಯಾವಾಗ ನಿರ್ಮಾಣವಾಯಿತೆಂದು ಹೇಳುವದು ಅಶಕ್ಯವೆಂದಾದರೂ ಈ ದೇವಸ್ಥಾನದ ಬಗ್ಗೆ ತಿಳಿಯುವ ಶಿಲಾಶಾಸನವೆಂದರೆ ಕ್ರಿ.ಶ. ೧೧೦೮ ರ ಸುಮಾರದ್ದು. ಚಾಲುಕ್ಯ ಆರ್ಮಡಿ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದ 'ನಿಂಬ'ನೆಂಬ ಅಧಿಕಾರಿಯು ಈ ದೇವಸ್ಥಾನಕ್ಕೆ ಕೆಲ ದಾನ ಮಾಡಿದನೆಂಬ ಉಲ್ಲೇಖವಿದೆ ಎಂದು ಡಾ॥ ರಿತ್ತಿಯವರ ಅಭಿಪ್ರಾಯ.

ಇಲ್ಲಿಯೇ ಅಂದರೆ, ಆ ಊರಿನ ಆಸು-ಪಾಸಿನಲ್ಲಿಯ ಶಾಸನಗಳಲ್ಲಿ 'ಕಾಳಮುಖಿ' ಪಂಥಕ್ಕೆ ಸೇರಿದ 'ಜ್ಞಾನರಾಶಿ' ಎಂಬ ಹೆಸರಿನ ಉಲ್ಲೇಖವಿದೆಯೆಂಬುದು ಸಂಶೋಧಕರ ಹೇಳಿಕೆ, ಅವರ ಹೇಳಿಕೆಯ ಪ್ರಕಾರ 'ಸ್ವಯಂಭು ಸಿದ್ಧನಾಥ' ದೇವರಿಗೆಂದು ಬಿಟ್ಟ ದತ್ತಿಯೊಂದನ್ನು ಇಲ್ಲಿಯ ಯತಿಗಳಿಗೆ ಒಪ್ಪಿಸಲಾಯಿತೆಂದು ಒಂದು ಶಾಸನ ಸಾರಿದೆ. ಆದರೆ ಇನ್ನೊಂದು ಶಾಸನದ ಪ್ರಕಾರ ಇವರು 'ರಾಜಗುರು' ಎಂಬ ಹೇಳಿಕೆ ಕಂಡು ಬರುತ್ತದೆ.

ಮಂದಿರದ ಗರ್ಭಗೃಹದಲ್ಲಿ ಜಟಾಗಡವಿದ್ದ ಮೂರ್ತಿಯೊಂದಿದೆ. ಅದು 'ಕಾಳಮುಖಿ' ಪಂಥಕ್ಕೆ ಸೇರಿದ ಯತಿಯದೇ ಇರಬಹುದೇ ಎಂಬುದೊಂದು ಸಂದೇಹವೂ ಇದೆ!

'ಕಾಳಮುಖಿ' ಪಂಥೀಯರು ಕಾಶ್ಮೀರದ ಕಡೆಯಿಂದ ಬಂದವರೆಂಬುದೊಂದು ಊಹೆ. ಪಾಶುಪತ ಮಾರ್ಗದ ಲಕುಲೇಶನ ಅನುಯಾಯಿಗಳಿರಬೇಕೆಂಬ ತರ್ಕ, ಮಧ್ಯ ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಕಾಳಮುಖಿರ ಪಾತ್ರ ಎದ್ದು ಕಾಣುವಂತಹದು. ೧೨-೧೩ ನೇ ಶತಮಾನಗಳಲ್ಲಿ ಈ ಕಾಳಮುಖಿ ಪಂಥ ಇಲ್ಲಿ ಬಹು ಪ್ರಚಾರದಲ್ಲಿತ್ತೆಂದೂ, ಆಗ್ಗೆ ಕೆಲ ದೇವಾಲಯಗಳು ಇವರ ಧಾರ್ಮಿಕ ಶೈಕ್ಷಣಿಕ ಕೇಂದ್ರಗಳಾಗಿದ್ದವೆಂಬುದು ತಜ್ಞರು ಹೇಳುತ್ತಾರೆ.

ಈ ಸಿದ್ದೇಶ್ವರ ದೇವಾಲಯಕ್ಕೆ 'ಪುರಸಿದ್ದಪ್ಪನ ಗುಡಿ'ಯೆಂದು ಕರೆಯುತ್ತಾರೆ. ಈ ಮಂದಿರದ ಸ್ಥಳಕ್ಕೆ 'ಪುರ' ಎಂಬುದು ಪ್ರಚಾರದಲ್ಲಿದೆ. ಮಂದಿರದ ಸ್ಥಳಕ್ಕೆ ಹೆಸರು ಬಂದಿದೆಯೋ ಸ್ಥಳದಿಂದಾಗಿ ಮಂದಿರಕ್ಕೆ ಈ ಹೆಸರು ಬಂದಿದೆಯೋ ತಿಳಿಯದು.

**ದಂತ ಕಥೆ**

ತಜ್ಞರಿಂದ ಮೇಲಿನ ಅಭಿಪ್ರಾಯ ಮೂಡಿ ಬಂದಿದ್ದರೆ ಸ್ಥಳೀಯರ ದಂತಕತೆಯೇ ಬೇರೆಯಾಗಿದೆ.



ಗರ್ಭಗುಡಿಯಲ್ಲಿ ಒಂದು ಭಾವಿಯಿದೆಯೆಂದು ಹೇಳುತ್ತಾರೆ. ಸಿದ್ದಪ್ಪನೆಂಬ ಭಾವಿಕನು ನಿತ್ಯ ಭಾವಿಯ ದಂಡೆಯ ಮೇಲೆ ಕುಳಿತು ನಿಷ್ಠೆಯಿಂದ ಶಿವಪೂಜೆ ಮಾಡುತ್ತಿದ್ದನಂತೆ. ಪೂಜೆಯಿಲ್ಲದೇ ಎಂದೂ ಆಹಾರ ಸ್ವೀಕರಿಸುತ್ತಿರಲಿಲ್ಲ. ಒಂದು ದಿನ ಪೂಜೆಯಲ್ಲಿ ಮಗ್ನನಾದಾಗ ಅದ್ಹೇಗೊ ಲಿಂಗವು ಜಾರಿ ಭಾವಿಯಲ್ಲಿ ಬಿತ್ತು. ಅದನ್ನು ಶೋಧಿಸಿ ಮೇಲಕ್ಕೆ ತರುವ ಪ್ರಯತ್ನಗಳೆಲ್ಲ ಪ್ರಯೋಜನಕ್ಕೆ ಬರಲಿಲ್ಲ. ಲಿಂಗ ಸಿಕ್ಕದೆ, 'ಅನ್ನ ನೀರು' ಇಲ್ಲವೆಂಬುದು ಸಿದ್ದಪ್ಪನ ನಿರ್ಧಾರ. ದುರ್ದೈವ ಲಿಂಗ ಸಿಗಲಿಲ್ಲ. ಸಿದ್ದಪ್ಪ ಅನ್ನ ಮುಟ್ಟಲಿಲ್ಲ. ಹಾಗೆ ತಪಸ್ಸು ನಾಮಸ್ಮರಣೆಯಲ್ಲಿಯೇ ಕುಳಿತ ಸಿದ್ದಪ್ಪನ ಪ್ರಾಣ ದೇಹವನ್ನು ಬಿಟ್ಟು ಹೋದುದೇ ಜನಕ್ಕೆ ತಿಳಿಯಲಿಲ್ಲ......

ಸಿದ್ದಪ್ಪ ಇನ್ನಿಲ್ಲ ಎಂದು ಜನಕ್ಕೆ ತಿಳಿದಾಗ ಊರೆ ಬಂದು ಉತ್ಸವ ಮಾಡಿತು ನಮೋ ಎಂದರು, ಈಗ ಅಲ್ಲಿರುವ ಗದ್ದ ಜಟಾಧಾರಿಯ ಮೂರ್ತಿ ಸಿದ್ದಪ್ಪನದೆಂದೇ ಹೇಳುತ್ತಾರೆ.

ದಂತಕತೆ ಏನೇ ಹೇಳಲಿ ಇತಿಹಾಸದ ಹಿನ್ನೆಲೆ ಏನೇ ಇರಲಿ, ಮಂದಿರ ಚಿಕ್ಕದಾದರೂ ಕಟೆದಿರುವ ಮೂರ್ತಿಗಳು ಕಿರಿಯದಾದರೂ ಶಿಲ್ಪ ಮತ್ತು ಕುಶಲತೆಯ ದೃಷ್ಟಿಯಿಂದ ಅವು ಉತ್ಕೃಷ್ಟವಾಗಿದೆ. ಶಿಲ್ಪಿಯ ನೈಪುಣ್ಯವನ್ನು ಸಾರಿ ಹೇಳುತ್ತದೆ. ಇಂಥ ಸೊಬಗಿನ ಸ್ಥಾನವನ್ನು ನೋಡದೇ ಹೋದರೆ ಜೀವನ ವ್ಯರ್ಥವೆನ್ನಬೇಕು!

ಅಂದಿನ ಕಾಲದಲ್ಲಿ ಇಂಥ ಮಂದಿರಗಳೇ ಊರಿನ ಚಟುವಟಿಕೆಗಳ ಕೇಂದ್ರ ಬಿಂದುವಾಗಿರುತ್ತಿದ್ದವು! ಈ ಮಾತನ್ನು ಡಿ. ವಿ. ಜಿ. ಯವರ ನುಡಿ ಸಮರ್ಥಿಸುತ್ತದೆ.

ಜೀವನ ಕೇಂದ್ರ

"......... ನಮ್ಮ ದೇಶದಲ್ಲಿ ಸಾಹಿತ್ಯವನ್ನು ಬಿಟ್ಟರೆ ಜನರ ಅಂತರಂಗ ಚರಿತ್ರೆ ಮೂರ್ತಿಭವಿಸಿ ನಿಂತಿರುವದು ನಮ್ಮ ದೇವಾಲಯದ ಶಿಲ್ಪದಲ್ಲಿ, ಅದರಲ್ಲೂ ದಕ್ಷಿಣ ದೇವಾಲಯಗಳಲ್ಲಿ. ನಮ್ಮ ಪೂರ್ವಿಕರು ಮನುಷ್ಯ ಕೃತಿಗಳಲ್ಲಿ ಶಾಶ್ವತವಾಗಿರಬಹುದಾದ್ದೂ, ಹಾಗೆ ಇರಲರ್ಹವಾದದ್ದೂ ದೇವಮಂದಿರ ಒಂದೇ ಎಂದು ತಿಳಿದುಕೊಂಡಿದ್ದಂತೆ ಕಾಣುತ್ತದೆ. ಗುಡಿಯೇ ಜೀವನ ಕೇಂದ್ರ,

ಆಹಾರ, ನಿದ್ರೆ, ಉದ್ಯೋಗಗಳ ವೇಳೆ ಬಿಟ್ಟು ಮಿಕ್ಕೆಲ್ಲ ಹೊತ್ತನ್ನು ಗುಡಿಯ ಆವರಣದಲ್ಲಿಯೇ ಕಳೆಯುತ್ತಿದ್ದರು. ಅದೇ ಅವರ ಪಾಠಶಾಲೆ, ಅವರ ಚಾವಡಿ, ಅವರ ನ್ಯಾಯಸ್ಥಾನ. ಅಲ್ಲಿಯೇ ಪುರಾಣ ಶ್ರವಣ, ಸಂಗೀತ, ನರ್ತನ, ಅಲ್ಲಿಯೇ ಬಂಧು-ಮಿತ್ರರ ದರ್ಶನ ಊರಿನ ಯೋಗಕ್ಷೇಮ ವಿಚಾರ-ವಿನೋದ ಕಾಲಕ್ಷೇಪ, ಮಂಗಳಕಾರ್ಯ. ಹೀಗೆ ನಮ್ಮ ಪೂರ್ವಿಕರಿಗೆ ಮನೆಗಿಂತ ಮುಖ್ಯವಾದದ್ದು ದೇವಸ್ಥಾನ, ಸುಖದಲ್ಲಿ ಸುಕೃತಕ್ಕೂ ದುಃಖದಲ್ಲಿ ಧೈರ್ಯಕ್ಕೂ ಆಕರ ಭೂಮಿಯಾಗಿದ್ದುದು ದೇವಸನ್ನಿಧಿ''.

ಈ ಮಾತನ್ನು ಡಿ. ವಿ. ಜಿ. ಆಕಾಶವಾಣಿ ಭಾಷಣದಿಂದ ಎತ್ತಿ ವೆಂಕೋಬರಾಯರು ತಮ್ಮ ''ಮೈಸೂರು ದೇಶದ ವಾಸ್ತುಶಿಲ್ಪ'' ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಈ ಮಂದಿರ ಹಾವೇರಿ ನಗರಕ್ಕೆ ಒಂದು ಭೂಷಣವಾಗಿದೆ. ಪ್ರಾಚ್ಯವಾಸ್ತು ಖಾತೆಯವರ ಕಾವಲುಗಾರರಿಂದ ದಕ್ಷತೆಯಿದ್ದರೂ ಮಂದಿರದ ಸುತ್ತಮುತ್ತ ಸುಂದರ ಉದ್ಯಾನವನ್ನು ಬೆಳೆಸಿದರೆ ನಗರಕ್ಕೊಂದು ಆಕರ್ಷಣೀಯ ಸ್ಥಳವಾಗುತ್ತದೆ. ಹಾವೇರಿಯಲ್ಲಿ ಪರಿಸರ ಪ್ರೇಮಿಗಳೂ ಇದ್ದಾರೆ. Rotar Line ಸಂಘ ಕ್ಲಬ್ಬುಗಳೂ ಇವರೆಲ್ಲ ಸೇರಿ, ಮುನಸಿಪಾಲ್ಟಿ ಮತ್ತು ಪ್ರಾಚ್ಯವಸ್ತು ಖಾತೆಯಿಂದೊಡಗೂಡಿ ಈ ಕಾರ್ಯಮಾಡಬೇಕೆಂದರೆ ದೊಡ್ಡ ಮಾತೇನಲ್ಲ!

ಹಾವೇರಿ ಒಂದು ವ್ಯಾಪಾರೀ ಕೇಂದ್ರವೂ ಅಹುದು ಈಗೀಗ ಉದ್ದಿಮೆಗಳು ಬೆಳೆಯುತ್ತಲಿವೆ. ಈಗದು ಜಿಲ್ಲಾ ಕೇಂದ್ರ, ಹುಕ್ಕೇರಿಮಠದಂತಹ ಆಧ್ಯಾತ್ಮಿಕ ಕೇಂದ್ರಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಮಾಡುವ ಕಾರ್ಯಗಮನಾರ್ಹ, ಸಿದ್ದಪ್ಪ ಹೊಸಮನಿಯಂತಹರ ಕರ್ಮಭೂಮಿ, ಮೈಲಾರ ಮಹದೇವರಂತಹರು ದೇಶಕ್ಕಾಗಿ ಬಲಿದಾನ ಮಾಡಿದ ನೆಲ.

ನಾಡಿನಲ್ಲಿಯೇ ವರ್ಷವಿಡೀ ಎತ್ತಿನ/ದನಗಳ ವ್ಯಾಪಾರ ನಡೆಯುವ ಕೇಂದ್ರ. ಇಂಥೆಲ್ಲ ಹಿನ್ನೆಲೆಯಲ್ಲಿ ನಗರ ಭರಭರಾಟಿಯಿಂದ ಬೆಳೆಯಬೇಕು ಸುಂದರವಾಗಿ ಬೆಳೆಯಬೇಕು. ಪುರಸಿದ್ದಪ್ಪನ ಗುಡಿಯಂಥ ಮಂದಿರಗಳನ್ನು ಹುಡುಕಿ ಅಂದಗೊಳಿಸಬೇಕು, ಸುಂದರಮಾಡಬೇಕು. ಅವನ್ನು ನೋಡಿ ಜನ ಆಕರ್ಷಿತರಾಗಬೇಕು, ಈ ಕಾರ್ಯದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿಗಳಿಗೂ ಬಹು ಜವಾಬ್ದಾರಿಯಿದೆ.

ಇಲ್ಲಿಯ ಹೆಗ್ಗೇರಿ ಕೆರೆಗೆ ವರ್ಷದ ಕೆಲ ಕಾಲ ಹೊರರಾಷ್ಟ್ರದಿಂದ ವಿಶಿಷ್ಟ ಪಕ್ಷಿಗಳು ವಲಸೆ ಬರುತ್ತವೆಂದು ಕೇಳಿದ್ದೇವೆ. ಅದು ನಿಜವಿದ್ದಲ್ಲಿ ಅದನ್ನು ಬರುವ ಪಕ್ಷಿಗಳಿಗೆ ಇನ್ನು ಹೆಚ್ಚು ಸೌಕರ್ಯಯುತವಾಗಿ ಮಾಡಬೇಕು ನಾಡಿನ ಪಕ್ಷಿಪ್ರಿಯರನ್ನು ಆಕರ್ಷಿಸಬೇಕು.

ಇದಕ್ಕೆಲ್ಲ ಅಧಿಕಾರಿಗಳ - ಜನತೆಯ ಆಸ್ಥೆ ಮಾತ್ರ ಬೇಕು.

ಪಾಪಾನ್ನಿವಾರಯತಿ ಯೋಜಯತೆಹಿತಾಯ । ಗುಹ್ಯಂಚ ಗೂಹತಿ ಗುಣಾನ್ ಪ್ರಕಟೀಕರೋತಿ ॥
ಆಪದ್ಗ ತಂಚ ನ ಜಹಾತಿ ದದಾತಿ ಕಾಲೇ । ಸನ್ಮಿತ್ರಲಕ್ಷಣಮಿದಂ ಪ್ರವದಂತಿ ಸಂತಃ ॥

**ಭಾವಾರ್ಥ** - ಪಾಪಕರ್ಮಗಳನ್ನು ದೂರ ಮಾಡೋಣ, ಹಿತವನ್ನು ಹೆಚ್ಚಿಸೋಣ, ಸದ್ಗುಣಗಳನ್ನು ವರ್ಣಿಸೋಣ, ದುರ್ಗುಣಗಳನ್ನು ಮುಚ್ಚಿಡೋಣ, ಸಂಪತ್ತಿನಲ್ಲಿಯೂ, ವಿಪತ್ತಿನಲ್ಲಿಯೂ ಒಂದೇಸವನೆ ಇರೋಣ - ಇವೆಲ್ಲ ಸನ್ಮಿತ್ರನ ಲಕ್ಷಣಗಳೆಂದು ಜಾಣರು ಹೇಳುತ್ತಾರೆ.


Sadbodha Chandrik. June 1999.

ನಕ್ಷತ್ರ ನಲಿಯುವ

ನೇತ್ರ

[illegible]

[illegible]

[illegible]


Gokul Road, HUBLI

ಪರದೇಶದವರಿಗೆ ಭಾರತ ಅತೀ ಆಕರ್ಷಣೀಯ ದೇಶ, ಹೌದು ಇಲ್ಲಿಯ ಅವಶೇಷ , ಇತಿಹಾಸ ಎಷ್ಟು ಆಕರ್ಷಣೀಯವೋ ಅಷ್ಟೇ ಈ ನೆಲದ ಸಂಸ್ಕೃತಿಯೂ ಅವರನ್ನು ಎಳೆಯುತ್ತದೆ, ಕೈ ಮಾಡಿ ಕರೆಯುತ್ತದೆ, ದೇಶದುದ್ದಕ್ಕೂ ಭಾಷೆ , ವೇಷಭೂಷಣ, ವಸ್ತ್ರ ಒಡವೆ ಎಲ್ಲವೂ ವಿಭಿನ್ನ, ಪರದೇಶದವರನ್ನು ಬಿಡಿ, ನಾವೇ ನೂರಾರು ಮೈಲಿ ಪ್ರವಾಸ ಮಾಡಿದರೆ ಅಚ್ಚರಿಯಾಗುವಂತಹ ಬದಲಾವಣೆಯ ಅನುಭವ ನಮಗೇ ಆಗುತ್ತದೆ.

ಕೈಯಲ್ಲಿಯ ಕಡಗ, ತೋಳಲ್ಲಿಯ ವಂಕಿ, ಬೆರಳಲ್ಲಿಯ ಉಂಗುರ, ಕಿವಿಯಲ್ಲಿಯ ಓಲೆಗಳು, ಕೊರಳಲ್ಲಿಯ ಸರಗಳ ಬೆಡಗನ್ನಂತೂ ಹೇಳತೀರದು. ಇನ್ನು ಟೊಂಕದ ಪಟ್ಟಿ , ಕಾಲಗೆಜ್ಜೆ , ಕಾಲಗಡಗ ಇವುಗಳ ಬೆಡಗೂ ಅಷ್ಟೇ ವಿವಿಧ ಸರಪಳಿ, ಪೈಜಣ. ಹೀಗೆ ಹಿಂದಿನ ಬೆಡಗನ್ನು ನೆನೆಸುತ್ತಾ ಇಂದು ಪ್ರತಿ ಮಹಿಳೆಯೂ ಕಾಲಲ್ಲಿ ಚೈನನ್ನು ಧರಿಸಿಯೇ ಧರಿಸುತ್ತಾಳೆ. ಅದು



ಇಂದಿನ ಫ್ಯಾಶನ್ನಾಗಿ ಪರಿಣಮಿಸಿದೆ. ಪಂಜಾಬಿ ಸಲ್ವಾರ ಕಮೀಜ ದೇಶದ ಯುವತಿಯರ ಸಾಧಾರಣವಾದ (common) ತೊಡುಗೆಯಾಗಿದೆ, ದಕ್ಷಿಣ ಭಾರತ 'ಇಡ್ಲಿ' ದೇಶದ ಉಪಹಾರ ಪದಾರ್ಥವಾಗಿ ಪರಿಣಮಿಸಿದಂತೆ.

ಇಷ್ಟು ವಸ್ತ್ರ ಒಡವೆಗಳಲ್ಲಿ ನಾಗರಿಕರ ಆಕಾರ ಅಲಂಕಾರ ಬೇರೆಯಿದ್ದಂತೆ. ಬುಡಕಟ್ಟು ಜನರಲ್ಲಿ ಗುಡ್ಡಗಾಡು ಜನರಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಉದಾಹರಣೆಗೆ 'ಲಂಬಾಣಿ'ಗಳ ವೇಷಭೂಷಣ ವಸ್ತ್ರ ಒಡವೆಯನ್ನು ಉದಾಹರಿಸಬಹುದು. ಇಂದು ನಾಗರಿಕತೆಯ ಸೆಳವಿಗೆ ಬಂದರೂ ಕೂಡ, ಮೂಲತಃ ಅವರು ಬುಡಕಟ್ಟು ಜನಾಂಗಕ್ಕೆ ಸೇರಿದವರೇ.

ಈ ಬರೆಹದಲ್ಲಿ– ಉಳಿದ ವಸ್ತ್ರ ಒಡವೆಗಳಿಗೆ

ಒತ್ತು ಕೊಡದೆ 'ನತ್ತ'ನ್ನೇ ಮುಖ್ಯ ವಿಷಯವಾಗಿ ವಿವರಿಸುತ್ತೇನೆ. ಬಹುಶಃ ಇದಕ್ಕಿರುವಷ್ಟು ವೈವಿಧ್ಯವನ್ನು ನಾನು ಬೇರೆ ಯಾವುದರಲ್ಲೂ ಕಂಡಿಲ್ಲ. ಬರೀ ಅಲಂಕಾರ, ರೂಪದಲ್ಲಿಯ ವೈವಿಧ್ಯಕ್ಕಿಂತಲೂ ಇದಕ್ಕೆ ಧಾರ್ಮಿಕ ಹಿನ್ನೆಲೆಯೂ ಅಷ್ಟೇ ಮಹತ್ವದ್ದು. ಇದನ್ನು ಧರಿಸುವಲ್ಲಿ, ಸೌಭಾಗ್ಯದ -ಮಾಂಗಲ್ಯದ ಕುರುಹೂ ಅಡಕವಾಗಿದೆ. ಉತ್ತರ ಭಾರತದಲ್ಲಿ ಯುವತಿಯನ್ನು ನೀನು ಸೌಭಾಗ್ಯವತಿಯಾಗಿರು ಎಂದು ಹರಸುವಲ್ಲಿ ಮದುಮಗಳಿಗೆ ನಿನ್ನ

ಮೂಗುತಿ ಕೊನೆವರೆಗೂ "ಭದ್ರವಾಗಿರಲಿ" ಎಂದು ಹರಸುತ್ತಾರೆ. ಒಂದು ವೇಳೆ ದುರ್ದೈವದಿಂದ ವೈಧವ್ಯ ಕಂಡಳೋ ಮೂಗುತಿ ಮೂಗಿನಿಂದ ಇಳಿಯುತ್ತದೆ. ನಮ್ಮಲ್ಲಿ ಮಾಂಗಲ್ಯಕ್ಕೆ ಇದ್ದ ಪ್ರಾಧಾನ್ಯವೇ ಅಲ್ಲಿ ಈ ಮೂಗುತಿಗೆ. ಕೆಲವೆಡೆ ಈ ಭಾಗ್ಯ ಕೈಕಡಗಕ್ಕೆ - ಅದೇ ಮಾಂಗಲ್ಯದ ಪ್ರತೀಕ.

ಉತ್ತರ ಕರ್ನಾಟಕದಲ್ಲಿ ಈ ಮೂಗುತಿಗೆ "ನತ್ತು" ಎಂದು ಕರೆಯುತ್ತಾರೆ. ಅದಕ್ಕೊಂದು ವೈಶಿಷ್ಟ್ಯಮಯವಾದ ಆಕಾರವೂ ಉಂಟು. ಗ್ರಾಮೀಣ ಮಹಿಳೆ ಆ ನತ್ತನ್ನು ಧರಿಸುವಲ್ಲೇ ಅಭಿಮಾನ ಪಡುತ್ತಾಳೆ. ಇನ್ನು ಸುಸಂಸ್ಕೃತ ಮಹಿಳೆಯೆಂಬುವವಳು ಧರಿಸುವ ಮೂಗುಬೊಟ್ಟು ವಿವಿಧ ಆಕಾರ, ವಿವಿಧ ವಸ್ತು ಅಂದರೆ ಚಿನ್ನ, ಮುತ್ತು, ಹರಳು - ಹರಳು ವಿವಿಧ ವರ್ಣದಲ್ಲೂ ಇರಬಹುದು. ಆಕಾರ ಮತ್ತು ಅಳತೆಯಲ್ಲೂ ವೈವಿಧ್ಯವಾಗಿರಬಹುದು !

ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕದಲ್ಲಿ ಈ ನತ್ತಿನ ಆಕಾರದ ವೈಶಿಷ್ಟ್ಯವೇ ಬೇರೆ. ಇದನ್ನು 'ಗಾಡೆ" ಎಂದು ಕರೆಯುತ್ತಾರೆ. ಹೆಚ್ಚಾಗಿ ಬ್ರಾಹ್ಮಣರು ಹಾಗೂ ಕೆಲ ಶ್ರೀಮಂತ ವರ್ಗದವರು ಇದನ್ನು ಮುಂಜಿವೆ, ಮದುವೆ ಹಾಗೂ ಪೂಜೆ ಪುನಸ್ಕಾರಗಳಂತಹ ಮಹತ್ವದ ದಿನಗಳಲ್ಲಿ ಮಾತ್ರ ಧರಿಸುತ್ತಾರೆ.
ಅದನ್ನು ನಿರ್ಮಿಸುವಲ್ಲಿ ಭಾರಿ ಮೊತ್ತದ ಮುತ್ತು, ಹರಳು, ವಜ್ರ, ಹಾಗೂ ಹವಳಗಳನ್ನು ಕಲಿಸುವದುಂಟು. ಇವನ್ನು ಧರಿಸುವಾಗಿನ ಇನ್ನೊಂದು ವೈಶಿಷ್ಟ್ಯವೆಂದರೆ, ಧರಿಸುವ ಸುಹಾಸಿನಿ ಕಚ್ಚೆ ಸೀರೆಯನ್ನು ಧರಿಸುವದು ಸಾಮಾನ್ಯ. ಈ 'ಗಾಡೆ'ದ ಬಳಕೆ ಕುಗ್ಗುತ್ತಲಿದೆ.

ತುಳುನಾಡಿನ ಸ್ವಭಾವ ಕಂಡು
ಬರುವುದೆ ಹೆಚ್ಚು! ಮೇಲಿನ
ಮೂಗುತಿಯೇ ಎಲ್ಲಾ ಮಹಿಳೆಯರಿಗೆ
ಇಷ್ಟ. ಮೂಗಿನ ಎರಡು ಬದಿಯಲ್ಲೂ ಈ
ಮೂಗುತಿ ಅಲಂಕರಿಸಿರುವುದು.
ಆಕಾರದಲ್ಲೂ ದೊಡ್ಡದಾಗಿರುತ್ತದೆ.
ನಿಮ್ಮ ಊರಿನಲ್ಲಿ ಈ ಒಡವೆಗೆ ವೈವಿಧ್ಯ
ಕಡಿಮೆಯೇ ಅನ್ನಬೇಡಿ. ಆದರೆ
ದೂರದ ನಾಡುಗಳಲ್ಲಿ ಅದರಲ್ಲೂ ಉತ್ತರ
ಭಾರತದಲ್ಲಂತೂ ಈ ಒಡವೆಯ
ವೈವಿಧ್ಯವು ಬಣ್ಣ, ಗಾತ್ರಗಳಲ್ಲೂ
ಆಕೃತಿಗಳಲ್ಲೂ ಹೇಳತೀರದಷ್ಟು
ವೈವಿಧ್ಯಮಯ. ಒಂದು (ಮುಡಿ)
ಕಿರವಷ್ಟು ಆಕೃತಿಯ ನತ್ತೂ ಇರುತ್ತದೆ
ಎಂದರೆ ನಿಮಗೆ ಆಶ್ಚರ್ಯ ಆದೀತಲ್ಲವೇ ?

ಉತ್ತರ ಕರ್ನಾಟಕ ಕೆಲಕಾಲ ಪುಣೆಯ
ಪೇಶ್ವೆಯವರ ಆಳ್ವಿಕೆಯಲ್ಲಿದ್ದಾಗ ಅವರ
ಸಂಸ್ಕೃತಿ, ಭಾಷೆ, ವೇಷಭೂಷಣಗಳ
ಪ್ರಭಾವದಂತೆಯೇ ಈ 'ಗಾಡೆ'ಯ
ಪಾಡಿಕೆಯೂ ಆಗಿರಬೇಕು. ಅಷ್ಟೇಕೆ
ಮುಕ್ಕಾಲು ಶತಮಾನದ ಹಿಂದಿನಷ್ಟು
ಕಾಲದಲ್ಲೂ ಇಲ್ಲಿಯ ಜನ ತಮ್ಮ
'ದುಬುವಾತ'ನ್ನು ಮರಾಠಿ
(ಮೋಡಿ)ಯಲ್ಲಿಯೇ ಮಾಡುತಿದ್ದ
ನಿದರ್ಶನಗಳಿವೆ. ಚಿಕ್ಕ ಗಾತ್ರದ ನತ್ತಿಗೆ
"ಮೂಗುಬೊಟ್ಟು" ಎಂದು ಕರೆದರೆ ದೊಡ್ಡ
ಆಕೃತಿಯಲ್ಲಿದ್ದುದೇ "ಗಾಡೆ".
ಇನ್ನು ಮೈಸೂರು ಕಡೆ ಹೊರಳಿದರೆ, ಅಲ್ಲಿ

ಚಿತ್ರಗಳನ್ನು ಸೂಕ್ಷ್ಮವಾಗಿ ವೀಕ್ಷಿಸಿದರೆ ನಿಮಗೇ ಆ ಮಾತು ಖಾತ್ರಿ ಆದೀತು. ಗಾತ್ರ ದೊಡ್ಡದಾದಷ್ಟು ನತ್ತಿನ ವಜನ ಹೆಚ್ಚಾಗುವುದೂ ಸಹಜ. ಅದು ಮೂಗಿನ ರಂಧ್ರದಲ್ಲಿ ತೂಗಾಡುವುದು ಕಷ್ಟ. ಅಂಥ ಪ್ರಸಂಗದಲ್ಲಿ ಬೇರೆ ಸರಪಳಿಗಳಿಂದ ಅದನ್ನು ಹೆಚ್ಚಾಗಿ ಕೂದಲಿನ ಆಧಾರಕ್ಕೆ ತೂಗುಹಾಕುವುದು ಅನಿವಾರ್ಯವಾಗಿರುತ್ತದೆ.

ಮುಸ್ಲಿಮ್ ಬಾಂಧವರು ಕೂಡ ನತ್ತನ್ನು ಉಪಯೋಗಿಸುತ್ತಾರೆ. ಆದರೆ ತೊಡುವ ರೀತಿಯಲ್ಲಿ ವ್ಯತ್ಯಾಸವಿದೆ. ಮೂಗಿನ ಬಾಜುಕ್ಕೆ ಅದಕ್ಕಾಗಿ ರಂಧ್ರ ಇರುವುದಿಲ್ಲ. ಎರಡು ಹೊರಳೆಗಳ ನಡುವೆ ಅದು ಜೋತಾಡುತ್ತಿರುತ್ತದೆ. ಬಹುಶಃ ಅದಕ್ಕೆ 'ಬುಲಾಕ್' ಎಂದು ಕರೆಯುತ್ತಾರೆಂಬ ಸಂದೇಹ ನನಗಿದೆ. ಹಿಂದೆ ನಮ್ಮ ನಿಟ್ಟಿನಲ್ಲಿ ಮುಸ್ಲಿಮ್ ರಾಜರ ಪ್ರಭಾವ ಹೆಚ್ಚಾಗಿದ್ದಾಗ ಕೆಲ ಹಿಂದು ಕುಟುಂಬದ ಯೌವ್ವನೆಯರೂ ಕೂಡ ಈ ಬುಲಾಕನ್ನು ಧರಿಸುತ್ತಿದ್ದರೆಂದು ನನ್ನ ಬಾಲ್ಯದ ನೆನಪುಗಳು ಹೇಳುತ್ತವೆ. ಅದಕ್ಕೆ ನಿದರ್ಶನವೆಂದರೆ ನನ್ನ ಸೋದರತ್ತೆಯವರು ಮದುವೆ ಮೊದಲು ಧರಿಸಿದ ಜ್ಞಾಪಕ ಮಂಜು ಮಂಜಾಗಿ ಉಳಿದಿದೆ.

ಭಾರತದ ಇನ್ನು ಕೆಲ ಮೂಲೆಗಳನ್ನು ತಿರುಗಿದರೆ ಅದು ಕೂಡ ಉತ್ತರ ಭಾರತದ ನಿಟ್ಟಿನಲ್ಲಿ ಅಡ್ಡಾಡಿದರೆ ಇನ್ನೂ ಹೆಚ್ಚಿನ ನತ್ತುಗಳ ಸ್ವರೂಪ ಕಂಡಾವು ಎಂಬುದಕ್ಕೆ ಸಂದೇಹವೇ ಕಾಣದು. ●



# ಕಸ್ತೂರಿ

ಮೇ-2002

# ಕಾಪಿ ಗಪಿಗಳು

ಚಿತ್ರ ಲೇಖನ ಎನ.ಕೆ.ಹೇಮಾಂಬಾ.

## ಬೌದ್ಧ ಸಂಸ್ಕೃತಿಯ ಬೆಳಕಿಂಡಿ

# ಕಾರ್ಲೆ ಗುಹೆಗಳು

ಚಿತ್ರ-ಲೇಖನ: ಎನ್.ಸಿ. ದೇಸಾಯಿ

**ಕಾ**ರ್ಲೆ ಮುಂಬೈ ಪುಣೆ ಮಾರ್ಗದಲ್ಲಿರುವ ಒಂದು ಸುಂದರ ಪ್ರಶಾಂತ ಹಳ್ಳಿ. ಬೌದ್ಧ ಸಂಸ್ಕೃತಿಯ ವಾಸ್ತುಶಿಲ್ಪಕ್ಕೆ ಉಜ್ವಲ ನಿದರ್ಶನವಾಗಿರುವ ಅಲ್ಲಿರುವ ಗುಹೆಗಳಿಂದ ಕಾರ್ಲೆ ಭಾರತದಾದ್ಯಂತ ಪ್ರಸಿದ್ಧವಾಗಿವೆ. ಬೌದ್ಧಧರ್ಮದ ಹೀನಾಯಾನ ಹಾಗೂ ಮಹಾಯಾನ ಪಂಥದ ಬೌದ್ಧ ಸನ್ಯಾಸಿಗಳ ಆರಾಧನಾ ಸ್ಥಳವಾಗಿ ಈ ಗುಹೆಗಳು ಕ್ರಿ.ಶಕ ಆರಂಭದ ಎರಡು ಶತಮಾನಕ್ಕೂ ಹಿಂದೆ ನಿರ್ಮಾಣವಾದವು. ನಿಸರ್ಗ ನಿರ್ಮಿತ ಕಡಿದಾದ ಕಲ್ಲು ಬಂಡೆಗಳಲ್ಲಿ ಕೊರೆದ ಈ ಗುಹೆಗಳನ್ನು ಬೌದ್ಧ ಸನ್ಯಾಸಿಗಳು ಮಳೆಗಾಲದ ತಿಂಗಳುಗಳಲ್ಲಿ ಪೂಜೆ ಹಾಗೂ ಪ್ರಾರ್ಥನೆಗೆ ಬಳಸುತ್ತಿದ್ದರು.

ಕಾರ್ಲೆಹಳ್ಳಿಯ ಉತ್ತರಕ್ಕೆ ಸುಮಾರು ಎರಡು ಮೈಲಿ ಅಂತರದಲ್ಲಿರುವ ಮೆಹಗಾಂವ್ ಹಳ್ಳಿಯ

ಸೆಠಿ ಭುತ್‌ಪಾಲನು ನಿರ್ಮಿಸಿದ ಶಿಲಾಭವನ

ಕಾರ್ಲೆಯ ಸ್ತೂಪ

ಸಮೀಪದಲ್ಲಿ ಈ ಗುಹೆಗಳಿವೆ. ಮೊದಲು ಬೌದ್ಧ ಧರ್ಮದ ಹೀನಾಯಾನ ಪಂಥದ ನಿಯಮಗಳ ಮೇರೆಗೆ ಇಲ್ಲಿ ಗುಹೆಗಳು ನಿರ್ಮಾಣವಾದವು. ಅವುಗಳನ್ನು ಅವರು 'ವಿಹಾರ' 'ಚೈತ್ಯ' ಎಂಬೆಲ್ಲ ಹೆಸರುಗಳಿಂದ ಕರೆಯುತ್ತಿದ್ದರು. ಚೈತ್ಯದಲ್ಲಿ ಪ್ರಾರ್ಥನೆಗಾಗಿ ಸ್ತೂಪ ಇರುತ್ತಿತ್ತು.

ಮಹಾಯಾನ ಪಂಥದವರ ಗುಹೆಗಳಲ್ಲಿ ಮುಖ್ಯ ಪ್ರಾರ್ಥನಾ ಸ್ಥಳದಲ್ಲಿ ಅವಲೋಕಿತೇಶ್ವರ ಬುದ್ಧನ ಮೂರ್ತಿಗೆ ಪ್ರಾಮುಖ್ಯ ನೀಡಲಾಗುತ್ತಿತ್ತು.

ಹೀನಾಯಾನ ಪಂಥದವರು ನಿರ್ಮಿಸಿದ ಕಾರ್ಲೆಗುಹೆಗಳಲ್ಲಿ ಚೈತ್ಯಗಳು ಆಕರ್ಷಣೀಯ ಭಾಗವಾಗಿವೆ. ಈ ಚೈತ್ಯಗಳು ಬೃಹದಾಕಾರದ ಸ್ತಂಭಗಳಿಂದ ಕೂಡಿದ್ದು ಸುಂದರವಾದ ಅಲಂಕೃತ ಕೆತ್ತನೆಯಿಂದ ಕೂಡಿವೆ. ದ್ವಾರದ ಇಬ್ಬದಿಗಳಲ್ಲಿ ಕೆತ್ತನೆಯ ಕಿಟಕಿಗಳಿರುತ್ತಿದ್ದವು. ಸ್ತೂಪಗಳು ಕೊನೆಯಲ್ಲಿ ಹಾಗೂ ಮಧ್ಯ ಭಾಗದಲ್ಲಿ ಅಲಂಕೃತವಾಗಿರುತ್ತಿದ್ದವು. ಚೈತ್ಯಗಳಲ್ಲಿ ನಾಲ್ಕೂ ನಿಟ್ಟಿನಲ್ಲಿ ಮುಖಮಾಡಿದ ಸಿಂಹಮುಖಗಳನ್ನು ಹೊತ್ತ ಅಶೋಕ ಸ್ತಂಭವೂ ಇರುತ್ತಿತ್ತು.

ಕ್ರಿ.ಶಕ ಪೂರ್ವದ 3ನೇ ಶತಮಾನದಲ್ಲಿ ಚಕ್ರವರ್ತಿ ಅಶೋಕ ಬೌದ್ಧಧರ್ಮದ ತತ್ವಗಳನ್ನು ಸಾರಲು ಆರಂಭಿಸಿದಾಗ ಬೌದ್ಧಧರ್ಮ ದಕ್ಷಿಣ ಭಾರತಕ್ಕೆ ಪ್ರವೇಶಿಸಿತು. ಈ ಉದ್ದೇಶದಿಂದಲೇ ಸಮ್ರಾಟ ಅಶೋಕನು ಬೌದ್ಧ ಸನ್ಯಾಸಿ 'ಧರ್ಮರಕ್ಷಿತಾ' ಎಂಬವನನ್ನು ದಕ್ಷಿಣ ಭಾರತಕ್ಕೆ ಕಳುಹಿಸಿದ. ಈ ರೀತಿಯ ಬೌದ್ಧಧರ್ಮ ಪ್ರಚಾರ 'ಅಪರಂತಾ' ಎಂದು ಹೆಸರಾಗಿತ್ತು. ಹಿಂದಿನ ಕಾಲದಲ್ಲಿ ಪಶ್ಚಿಮಘಟ್ಟ ಪ್ರದೇಶದಲ್ಲಿ ಶಖ ಹಾಗೂ ಪಾರ್ಥಿಯನ್ನರು ಹೆಚ್ಚಿನ ಸಂಖ್ಯೆಯಲ್ಲಿ ನೆಲಸಿದ್ದರು. ಇವರು ಪರದೇಶಗಳಿಂದ ವ್ಯಾಪಾರಕ್ಕಾಗಿ ಇಲ್ಲಿಗೆ ಬಂದಿದ್ದರು. ಹೀಗಾಗಿ ಇವರನ್ನು 'ಯವನರು' ಎಂದು ಸಂಭೋದಿಸುವ ಕ್ರಮವೂ ರೂಢಿಯಲ್ಲಿತ್ತು. ಅವರಲ್ಲಿ ಸೌರಾಷ್ಟ್ರದ ರಾಜ್ಯಪಾಲನಾಗಿದ್ದ 'ತುಷಾಸ್ತ' ಎಂಬವನೇ ಮುಖ್ಯಧರ್ಮ ಪ್ರಚಾರಕನಾಗಿದ್ದ.

## ವ್ಯಾಪಾರ ಮಾರ್ಗಗಳ ಮಹತ್ವ

ಕ್ರಿಸ್ತಶಕ ಪೂರ್ವದಲ್ಲಿ ಪಶ್ಚಿಮಘಟ್ಟ ಪ್ರದೇಶದಲ್ಲಿ ಎರಡು ಬಂದರುಗಳು ಕಾರ್ಯನಿರ್ವಹಿಸುತ್ತಿದ್ದವು. ಒಂದು ಭರೂಚ (ಹಿಂದಿನ ಭರುಕಚ್ಛಾ) ಎರಡನೆಯದು ಸೋಪಾರಾ. (ಹಿಂದಿನ ಸುರಪಾರಕ) ಈ ಎರಡು ಬಂದರುಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಸಾತವಾಹನರು, ಕ್ಷತ್ರಪರು ಕಚ್ಚಾಡುತ್ತಿದ್ದರು. ಹೊರಗಿನಿಂದ ಬರುತ್ತಿದ್ದ ಹಡಗುಗಳ ದಾರಿ ತಪ್ಪಿಸಿ ಕಚ್ಛ ಹಾಗೂ ಭರೂಚದ ಕೊಲ್ಲಿಯೆಡೆಗೆ ಕಳುಹಿಸುವ ಕುತಂತ್ರವನ್ನೂ ಮಾಡಿದ್ದುಂಟು.

ಸೊಪಾರದ ಕೊಲ್ಲಿಯಲ್ಲಿ (ಸಮುದ್ರದ ಹಿನ್ನೀರು) ಎರಡು ಮಹತ್ವದ ಬಂದರುಗಳಿದ್ದವು. ಕಲ್ಯಾಣ ಮತ್ತು ಚೆವುಲ. ಕಲ್ಯಾಣ ಬಂದರು ವರೆಗೆ ಚಿಕ್ಕ ಹಡಗುಗಳು ತಲುಪುವ ವ್ಯವಸ್ಥೆ ಇದ್ದಿತು. ಮುಂಬಯಿಯಿಂದ ಉತ್ತರಕ್ಕೆ 30 ಮೈಲಿ ದೂರದಲ್ಲಿರುವ ಕಾನ್ಹೇರಿ ಗುಹೆಗಳಲ್ಲಿ ಈ ವಿಷಯವನ್ನು ಅರುಹುವ ಶಿಲಾಶಾಸನವಿದೆ.

ಅಂದು ಮೂರು ಪ್ರಮುಖ ವ್ಯಾಪಾರ ಮಾರ್ಗಗಳಲ್ಲಿ ಸರಕುಗಳ ಸಾಗಾಣಿಕೆ ನಡೆಯುತ್ತಿತ್ತು. ಮುಂಬಯಿ ಆಗ್ರ ಮಾರ್ಗದಲ್ಲಿ ತಲಘಾಟವನ್ನು ನಾಶಿಕ ಮತ್ತು ಔರಂಗಬಾದ ಮಾರ್ಗವಾಗಿ ಸಾಂಚಿಯನ್ನು, ಮುಂಬೈ ಪುಣೆ ಮಾರ್ಗದಲ್ಲಿಯ ಬೋರಘಾಟನ್ನು ದಾಟಿ ತೇರ, ಉಸ್ಮಾನಾಬಾದ್ ಹಾಗೂ ಮರಾಠ



ಗಜ ಮತ್ತು ಮಿಥುನ ಕೆತ್ತನೆಗಳು

ಪ್ರದೇಶಕ್ಕೆ ಸಾರಿಗೆ ವ್ಯವಸ್ಥೆ ಇದ್ದಿತು. ಈ ವ್ಯಾಪಾರ ಮಾರ್ಗಗಳ ವ್ಯವಸ್ಥೆಯಿಂದಾಗಿ ಈ ಭಾಗದಲ್ಲಿ ಬೌದ್ಧ ಪ್ರಾರ್ಥನಾ ಮಂದಿರಗಳು ನಿರ್ಮಾಣವಾದವು.

ಕಾರ್ಲೆ ಗುಹೆಯ ಚೈತ್ಯಗಳು ಭವ್ಯವಾಗಿವೆ. ಶಿಲ್ಪಕಲಾ ಸೌಂದರ್ಯಕ್ಕೂ ಅವು ಹೆಸರಾಗಿವೆ. ಪ್ರತಿಯೊಂದು ಚೈತ್ಯದ ಮುಂಭಾಗದಲ್ಲಿ ಹದಿನೈದು ಅಡಿ ಉದ್ದ ಹಾಗೂ ಐವತ್ತೆರಡು ಅಡಿ ಅಗಲವಿರುವ ವಿಶಾಲ ಮೈದಾನವಿದೆ. ಇದರ ಮುಂಭಾಗದಲ್ಲಿ ಮಿಥುನ ಹಾಗೂ ಆನೆಯ ಶಿಲ್ಪಗಳಿವೆ. ಬೌದ್ಧ ಸನ್ಯಾಸಿಗಳು ಧನಸಹಾಯ ಮಾಡಿ ಇವುಗಳನ್ನು ನಿರ್ಮಿಸಿದರೆಂದು ಪ್ರತೀತಿ ಇದೆ.

ಸ್ತ್ರೀ ವಿಗ್ರಹಗಳ ಕೇಶಾಲಂಕಾರ ಬೆಡಗು

ವಿಶಾಲವಾದ ಚೈತ್ಯದ ಸೂರುಗಳು ಕಮಾನುಗಳನ್ನು ಸಂಪೂರ್ಣವಾಗಿ ಕಾಷ್ಠದಿಂದ ತಯಾರಿಸಲಾಗಿದೆ. 'ಧೇನುಕಾಕಾ'ದಿಂದ ಬಂದ ಬಡಿಗರು ಅದನ್ನು ತಯಾರಿಸಿದರೆಂಬ ಉಲ್ಲೇಖಗಳೂ ಇವೆ. ಕೆಲವು ಮುಖದರ್ಶನದ ಭಿತ್ತಿಕೆತ್ತನೆಗಳು ನಾಲ್ಕು ಅಂತಸ್ತುಗಳಲ್ಲಿ ನಿರ್ಮಾಣವಾಗಿದ್ದು ಮೂರ್ತಿಗಳನ್ನಿರಿಸಲು ಮಾಡಗಳು ನಿರ್ಮಾಣವಾಗಿವೆ. ಗುಹೆಯ ಒಳಗಡೆ

ಯಥೇಚ್ಛ ಬೆಳಕು ಹರಿಯಲು ಕಿಟಕಿಗಳನ್ನು ನಿರ್ಮಿಸಲಾಗಿದೆ.

### ಅತಿದೊಡ್ಡ ಚೈತ್ಯ

ಕಾರ್ಲೆಯ ಅತಿದೊಡ್ಡ ಚೈತ್ಯವು 124 ಅಡಿ 3 ಅಂಗುಲ ಉದ್ದವಿದ್ದು 45 ಅಡಿ 6 ಅಂಗುಲ ಅಗಲವಿದೆ. ಮಧ್ಯಭಾಗದ ಸೂರಿನ ಎತ್ತರ 46 ಅಡಿ ಇದೆ. ಈ ಚೈತ್ಯದಲ್ಲಿ ಕಮಾನಿನಾಕಾರದ ಜಂತಿಗಳನ್ನು ಕಾಷ್ಠದಿಂದಲೇ ನಿರ್ಮಿಸಲಾಗಿದೆ. ಕಾಷ್ಠದ ಜಂತಿಗಳು ಶಿಲಾಸ್ತಂಭಗಳಿಗೆ ಆಧಾರವಾಗಿವೆ. ಒಟ್ಟು 37 ಸ್ತಂಭಗಳು ಈ ಚೈತ್ಯದಲ್ಲಿವೆ.

ಕಾರ್ಲೆಯ ಸ್ತೂಪಗಳ ಅಲಂಕೃತ ಪಟ್ಟಿಗಳು ಹಾಗೂ ಮೇಲಿನ ಛತ್ರಿ ಸಾಂಚಿಯ ಸ್ತೂಪವನ್ನು ಹೋಲುತ್ತವೆ.

ಸ್ತೂಪಗಳ ಮೇಲೆ ಸೂರ್ಯನ ಬೆಳಕು ಧಾರಾಳವಾಗಿ ಬೀಳುವಂತೆ ಮಾಡಿರುವ ವ್ಯವಸ್ಥೆಯನ್ನು ನೋಡಿದಾಗ ಅಂದಿನಕಾಲದ ವಾಸ್ತುತಜ್ಞರ ಎಂಜಿನಿಯರಿಂಗ್ ಚಾತುರ್ಯ ವಿಸ್ಮಯಗೊಳಿಸುತ್ತದೆ.

ಚೈತ್ಯದ ಎತ್ತರದ ಕಾಷ್ಠ ಜಂತಿಗಳನ್ನು ಹೊಂದಿದ ಛತ್ತು

ಬೆಟ್ಟದ ಮೇಲಿನ ಬಂಡೆಯಲ್ಲಿ ಕೊರೆದ ಕಾರ್ಲೆಯ ಚೈತ್ಯಗುಹೆಗಳು ವ್ಯಾಪಾರಿ ಮಾರ್ಗದಲ್ಲಿದ್ದ ಕಾರಣ ಅವುಗಳ ನಿರ್ಮಾಣಕ್ಕೆ ದಾನಿಗಳು ಸುಲಭವಾಗಿ ದೊರೆತರು. 'ಧೇನುಕಾಕಾ'ದ ಯವನರು ಈ ದಿಶೆಯಲ್ಲಿ ಉಪಯುಕ್ತ ಕಾರ್ಯ ಮಾಡಿದರೆಂದು ಗುಹೆಯಲ್ಲಿರುವ ಕೆಲವು ಶಾಸನಗಳು ಹೇಳುತ್ತವೆ. ಆದರೆ

ಧೇನುಕಾಕಾ ಎಲ್ಲಿತ್ತು ಎಂಬುದು ಇಂದಿಗೂ ನಿಗೂಢ ಒಗಟಾಗಿದೆ.

ಕಾರ್ಲೆಯ ಗುಹೆಗಳ ಒಳಗೆ ಬಂಡೆಗಳಲ್ಲಿ ಸ್ತ್ರೀ ಪುರುಷರ ವಿವಿಧ ಅಂಗಭಂಗಿಗಳನ್ನು ವರ್ಣಿಸುವ ಮಿಥುನ ಶಿಲ್ಪಗಳಿವೆ. ಗಾತ್ರದಲ್ಲಿ ದೊಡ್ಡದಾಗಿರುವ ಈ ಶಿಲ್ಪಗಳ ವೇಷಭೂಷಣ, ಒಡವೆಗಳ ಸ್ವರೂಪ, ಮೈಮಾಟ ವೈವಿಧ್ಯಮಯವಾಗಿವೆ. ಸೌಂದರ್ಯದಲ್ಲಿ, ಗಾಂಭೀರ್ಯದಲ್ಲಿ ಅವು ಮಥುರಾದಲ್ಲಿರುವ ಪ್ರಸಿದ್ಧ ಯಕ್ಷಿಯರಿಗಿಂತಲೂ ಮಿಗಿಲಾಗಿವೆ ಎಂದು ಕಲಾವಿಮರ್ಶಕರು ಅಭಿಪ್ರಾಯಪಡುತ್ತಾರೆ.

ಚೈತ್ಯದ ಕಂಬಗಳ ಮೇಲೆ ಗಜ-ಮಿಥುನ ವಿಗ್ರಹಗಳು.

ಕಾರ್ಲೆಯ ಚೈತ್ಯಗಳಲ್ಲಿ ಬೃಹದಾಕಾರದ ಕಲಾತ್ಮಕ ಶಿಲ್ಪಗಳ ಕೆತ್ತನೆ ಇದ್ದರೂ ಬುದ್ಧನ ಪ್ರತಿಮೆ ಮಾತ್ರ ಎಲ್ಲಿಯೂ ಎದ್ದು ಕಾಣಿಸುವುದಿಲ್ಲ, ಒಂದು ಕಡೆ ಮಾತ್ರ ಬುದ್ಧನ ಚಿಕ್ಕ ಮೂರ್ತಿ ಇದೆ. ಕಾರ್ಲೆಯ ಚೈತ್ಯಗಳ ಕೆತ್ತನೆಯ ಪ್ರಾರಂಭದ ಕಾಲಘಟ್ಟದಲ್ಲಿ ಬುದ್ಧನ ಮೂರ್ತಿಗೆ ಸಂಬಂಧಿಸಿದಂತೆ ವಿಶೇಷ ಮಹತ್ವ ನೀಡಿದಂತೆ ಕಾಣುವುದಿಲ್ಲ. ನಾಲ್ಕನೇ ಶತಮಾನದ ನಂತರ ಮಹಾಯಾನ ಪಂಥದವರು ಚೈತ್ಯಗಳ ನಿರ್ಮಾಣ ಕಾರ್ಯದಲ್ಲಿ ಆಸಕ್ತಿ ವಹಿಸಿದ ನಂತರ ಬುದ್ಧನ ಮೂರ್ತಿಗಳ ನಿರ್ಮಾಣಕ್ಕೆ ಮಹತ್ವ ದೊರೆತದ್ದು ಕಾಣುತ್ತದೆ.

# ಹೀಗಿದ್ದರು ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್

ಟೀಕಲ್ ಗೋಪಾಲಕೃಷ್ಣ

1953 ರಲ್ಲಿ ನಾನು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ ಓದುತ್ತಿದ್ದಾಗ ಒಮ್ಮೆ ಸರ್ ಸಿ.ಪಿ. ಯವರು ಭಾಷಣ ಮಾಡಲು ಬಂದಿದ್ದರು. ಜಮ್ ಎಂದು ಮುಕ್ಕಾಲು ಗಂಟೆ ಇಂಗ್ಲೀಷಿನಲ್ಲಿ ಭಾಷಣ ಮಾಡಿ ಕುಳಿತಾಗ ನಿಶ್ಯಬ್ಧವಾಗಿದ್ದ ಆ ದೊಡ್ಡ ಹಾಲಲ್ಲಿ ಕರತಾಡನ ಐದು ನಿಮಿಷಗಳ ವರೆಗೆ ನಿಲ್ಲಲಿಲ್ಲ.

ಒಳ್ಳೆಯ ಆಜಾನು ಬಾಹು. ಕ್ಲೋಸ್ ಕಾಲರ್ ಕೋಟು, ಪ್ಯಾಂಟು, ಬೂಟು, ತಲೆಯ ಮೇಲೆ ಬಿಳಿ ಪೇಟ, ಕನ್ನಡಕ. ಆ ಮುದಿ ವಯಸ್ಸಿನಲ್ಲೂ ಮುಖದ ಮೇಲೆ ವರ್ಚಸ್ಸು ಎದ್ದು ಕಾಣುತ್ತಿತ್ತು.

ಆಧುನಿಕ ಭಾರತದ ನಿರ್ಮಾಪಕರಾದ ತಿಲಕ್, ಗೋಖಲೆ, ಸಿ.ಆರ್. ದಾಸ, ಗಾಂಧಿ, ನೆಹರು, ಸರೋಜಿನಿ ನಾಯ್ಡು, ಸರ್ ಎಂ. ವಿಶ್ವೇಶ್ವರಯ್ಯ ಅವರ ಸಾಲಿನಲ್ಲಿ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್‌ರವರ ಹೆಸರೂ ಅಮರವಾಗಿದೆ.

ಅವರು ಹತ್ತು ವರ್ಷಗಳ ಕಾಲ ತಿರುವಾಂಕೂರಿನಲ್ಲಿ ದಿವಾನರಾಗಿದ್ದರು. ಆಗ ಅವರು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದರು. ಆಗಿನ ಕಾಲದಲ್ಲಿ ದಲಿತರಿಗೆ ದೇವಸ್ಥಾನಗಳಲ್ಲಿ ಪ್ರವೇಶ ನೀಡಬೇಕೆಂದು ಆಜ್ಞೆ ಮಾಡಿದ ಸಾಹಸಿ ಅವರು. ಅವರ ಕಾಲದಲ್ಲಿ ನದಿಗಳಿಗೆ ಕಟ್ಟೆಗಳನ್ನು ಕಟ್ಟಲಾಯಿತು. ಗೊಬ್ಬರದ ಕಾರ್ಖಾನೆ ನಿರ್ಮಾಣವಾಯಿತು. ಕಾಲುವೆಗಳು ಆದವು. ವಿದ್ಯುಚ್ಛಕ್ತಿ ವ್ಯವಸ್ಥೆ ರೂಪಿಸಲಾಯಿತು.

ಸಿ.ಪಿ. ರಾಮಸ್ವಾಮಿ ಅಯ್ಯರ್ ವೈಸ್‌ರಾಯರ ಎಕ್ಸಿಕ್ಯುಟಿವ್ ಕೌನ್ಸಿಲ್ ಸದಸ್ಯರಾಗಿದ್ದರು. ಆನಿಬೆಸೆಂಟರ ಸ್ನೇಹಿತರಾಗಿದ್ದರು. ಮೋತಿಲಾಲ್ ನೆಹರುರವರಿಗೆ ಕಾನೂನು ಸಲಹೆಗಾರರು ಆಗಿದ್ದರು. ಮೂರು ವಿಶ್ವವಿದ್ಯಾಲಯಗಳಿಗೆ ಉಪಕುಲಪತಿ ಆಗಿದ್ದರು. ಲಂಡನ್‌ನಲ್ಲಿ ಜರುಗಿದ ಮೂರನೇ ಚಕ್ರಗೋಷ್ಠಿಯಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ಒಮ್ಮೆ ಸರ್ ಸಿ.ಪಿ. ಪಂಜಾಬ್ ವಿಶ್ವವಿದ್ಯಾಲಯದ ಕಾನ್ವೋಕೇಷನ್ ಭಾಷಣ ಮಾಡಲು ಲಾಹೋರಿಗೆ ಹೋಗಿದ್ದಾಗ ಅಲ್ಲಿ ನೆರೆದಿದ್ದವರನ್ನು ತಮ್ಮ ಇಂಗ್ಲೀಷ್ ವಾಗ್ವೈಖರಿಯಿಂದ ಮಂತ್ರ ಮುಗ್ಧರನ್ನಾಗಿ ಮಾಡಿದರಂತೆ, ಅವರು ಹಾಸ್ಯ ಪ್ರವೃತ್ತಿಯವರೂ ಆಗಿದ್ದರು. ಆಂಗ್ಲ ಹೆಂಗಸರು ತಮ್ಮನ್ನು ದಿವಾನ್ ಎಂದು ಕರೆಯಲು ಬಾರದೆ, ಡಿಯರ್ ವನ್ ಎನ್ನುತ್ತಾರೆ ಎಂದು ತಮಾಷೆಯಾಗಿ ನುಡಿದು ಎಲ್ಲರನ್ನು ನಗೆಯ ಹೊಳೆಯಲ್ಲಿ ತೇಲಿಸಿದರಂತೆ, ಸರ್ ಸಿ.ಪಿ. ಅವರ ಮಗಳ ಹೆಸರು ನಂದಿತ ಕೃಷ್ಣ. ಚೆನ್ನೈನಲ್ಲಿ ಗ್ರೋವ್ ಎಂಬ ಇವರ ತಾತನ ಬಂಗಲೆಯಲ್ಲಿ ನೆಲಸಿದ್ದಾರೆ. ನಂದಿತ ಕೂಡ ಅನೇಕ ಪುಸ್ತಕಗಳನ್ನು ಬರೆದಿದ್ದಾಳೆ.

ಸರ್. ಸಿ.ಪಿ. 1879 ರಲ್ಲಿ ದೀಪಾವಳಿಯ ಶುಭದಿನದಂದು ಜನಿಸಿದರು. ಬಾಲ್ಯದ ದಿನಗಳಿಂದಲೇ ಎಲ್ಲಾ ಪರೀಕ್ಷೆಗಳಲ್ಲೂ ಮೊದಲ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಿದ್ದುದರಿಂದ

# ಶಿಲ್ಪಾಚಾರ್ಯರ
# ಕೆತ್ತಲಂಕಾರ

ಒಬ್ಬೊಬ್ಬರದೂ
ಒಂದೊಂದು ಭಂಗಿ.
ಒಂದೊಂದು ಶೈಲಿ.
ಶಿಲ್ಪಿಯ ಕಲೆಯಲ್ಲಿ
ಕಲ್ಲು ಕೇಶವಾದ ಬಗೆ.







ಚಿತ್ರ – 8

ಸೌಂದರ್ಯ ಪ್ರಜ್ಞೆ, ಶೃಂಗಾರ ದೃಷ್ಟಿ ನಮ್ಮ ಪ್ರಾಚೀನ ಭಾರತದ ಶಿಲ್ಪಿಗಳಲ್ಲಿದ್ದಷ್ಟು ಮತ್ತಾರಿಗೂ ಇರಲಿಲ್ಲವೆಂದೆನಿಸುತ್ತದೆ! ಅದಕ್ಕೆ ಅಂದು ಅವರು ನಿರ್ಮಿಸಿದ ಶಿಲಾದೇಗುಲಗಳು, ಕಲೆಯ ಗಿರಿಗಳೇ ಸಾಕ್ಷಿ ಎನ್ನಬೇಕು. ಅಹುದು. ಅವು ಕಲೆಯ ಗಿರಿಗಳು, ಕುಶಲತೆಯ ಪರ್ವತಗಳು! ಅದರಲ್ಲಿ ನಿರ್ಮಿತವಾದ ಒಂದೊಂದು ಶಿಲೆಯೂ ಕುಶಲತೆಯ ತುಂಡುಗಳು!

ಆಯಾಯ ರಾಜರ ಕಾಲಕ್ಕೆ ನಿರ್ಮಿತವಾದ ಶಿಲಾ ಮಂದಿರಗಳ ಶೈಲಿ, ನಿರ್ಮಿಸುವ ತಂತ್ರ, ಶಿಲ್ಪಿಯ ಚಾತುರ್ಯ, ಭಿನ್ನವಾಗಿರಬೇಕು. ಆದರೆ ಆ ನಿರ್ಮಿತಿಯಲ್ಲಿ ಅಡಕವಾದ ಕಲಾಕೌಶಲ್ಯದ ಆಳವನ್ನು, ಅಳೆಯಲು ಅಸಾಧ್ಯವಾದುದು.

ಬೇಲೂರಿನ ಶಿಲಾಬಾಲಿಕೆಯರು, ಅವರ ಮೈಮಾಟ, ನಿಲ್ಲುವ ಭಂಗಿ, ಅದೆಂತಹ ಆಭರಣಗಳು, ಉಡುಪಿನ ಸೊಬಗು. ಹೇಳತೀರದು. ನೋಡಿ ವರ್ಣಿಸಲಸಾಧ್ಯ!– ಆಭರಣಗಳ ಒಂದೊಂದೇ ವಸ್ತುವನ್ನು ವಿಂಗಡಿಸಿದರೂ,

# ಶಿಲಾಬಾಲಿಕೆಯರ ಕೇಶಾಲಂಕಾರ

ಚಿತ್ರ-ಬರಹ: ಎಸ್.ಪಿ. ದೇಸಾಯಿ

ಗಾಪಿಕಾ ಶಿಲ್ಪದಲ್ಲಿ ನಿರ್ಮಾಣವಾದ ಬಗೆ. ಅವುಗಳನ್ನು ಕಲ್ಪಿಸಿದ ರೀತಿಯನ್ನು ಮನದಲ್ಲಿ ತಂದರೆ, ಆ ಶಿಲ್ಪಿಗಳಿಗೆ, ನರ್ತಕಿಯರಿಗೆ ಅದೆಂತಹ ಕಲ್ಪನಾಶಕ್ತಿ ಇತ್ತು ಎಂದು ಅಚ್ಚರಿಯಾಗುತ್ತದೆ.

ಕಾಲುಗಳ ಸರಪಳಿಯನ್ನೇ ತೊಡಿಕೊಂಡರೂ ಒಂದು ಕಾಲಿನಲ್ಲಿದ್ದುದು ಇನ್ನೊಂದು ಕಾಲಿನಲ್ಲಿಲ್ಲದ ನಕ್ಷೆ. ಅದೇ ಹಾರ, ಕೈಗಳ ನಕ್ಷೆ. ಬಂಗಾರದ ಬಂಗೂ ಅಷ್ಟೆ ಮೂಗುತಿಯ ವಿನ್ಯಾಸವೂ ಹಾಗೆ, ಕರ್ಣಕುಂಡಲದ ರೀತಿಗಳು ವರ್ಣನಾತೀತ! ಇನ್ನು ಕೇಶದಲ್ಲಿ ಸಿಕ್ಕಿಸುವ ಪುಷ್ಪದ ಪುಷ್ಪಗಳು. ಮನವನ್ನು ಸೂರೆಗೊಳ್ಳುವಂತಹವು!

ಕೊರಳನ್ನು ಅಲಂಕರಿಸುವ ಸರ, ಪದಕ, ಗುಂಡುಗಳ ವೈವಿಧ್ಯಮಯ ನಕ್ಷೆಗಳಗಂತೂ ಲೆಕ್ಕವೇ ಇಲ್ಲ. ಅವುಗಳ ಮಧ್ಯೆ ನೇತಾಡುವ ಪದಕಗಳ ಹಾಡುವ ಪದಗಳ ರಾಗ ವಿವಿಧ. ತಾಳಗಳು ಸೂರೆಂಟು ರಟ್ಟೆಗೆ ಕಟ್ಟುವ ಪಟ್ಟಿಯ ನಕ್ಷೆಯೂ ಅಷ್ಟೇ ವೈವಿಧ್ಯಮಯ. ಇನ್ನು ನಡುವನ್ನು ಸುತ್ತುವ ಅಲಂಕಾರಿಕ ವಸ್ತುಗಳ ನಕ್ಷೆಗಳನ್ನು ವೀಕ್ಷಿಸಿದರೆ ನೋಡುತ್ತಲೇ ಬಳಲುತ್ತೇವೆ! ಹೀಗೆ ಹಿಂದಿನ ಕಲಾವಿದರ ಕಲೆಯ ಶೈಲಿ ಅದನ್ನು ಶಿಲೆಯುವ ಶಿಲ್ಪಿಗಳನ್ನು ನೆನವಾಗ, ಒಮ್ಮೆಲೆ ನನ್ನ ಮನಸ್ಸು ಅವರ ಕೇಶಾಲಂಕಾರದ ಕಡೆಗೆ ಹೊರಳಿತು. ಅದನ್ನೇ ಮುಖ್ಯ ವಿಷಯವನ್ನಾಗಿ ನೋಡುವ ಮನಸ್ಸಾಯಿತು. ಆದುದು, ಅದನ್ನು ಬಿಚ್ಚಿ ಬಿಡುತ್ತಾ ಹೋದಂತೆ, ಈ ಸಲ ಈ ಶಿಲ್ಪಿಗಳನ್ನು ಕ್ಯಾಮರಾ ಕಣ್ಣಿನಿಂದ ಸೆರೆ ಹಿಡಿಯುವುದು ಬೇಡ. ಆ ಶಿಲ್ಪಿಗಳು ಕಲ್ಲಿನಲ್ಲಿ ಕಟೆದುದನ್ನು ಕುಂಚಗಳ ಮೂಲಕವಾದರೂ ಮೂಡಿಸಲು ಪ್ರಯತ್ನಿಸೋಣವೆಂದೆನಿಸಿತು. ಆ ಪ್ರಯತ್ನ ಮಾಡಿದ್ದೇನೆ.

ನಾನಂತು ಆ ಶಿಲ್ಪಿಗಳು ನಿರ್ಮಿಸಿದ ಸ್ವಾದವನ್ನು ಈ ರೀತಿಯಾಗಿ ಅಂದರೆ, ವರ್ಣದಲ್ಲಿ ನಿರ್ಮಿಸುವಲ್ಲಿ– ನೋಡುವುದಕ್ಕಿಂತ ಛಾಯಾಚಿತ್ರ ತೆಗೆಯುವುದಕ್ಕಿಂತ ಹೆಚ್ಚಾಗಿ ಅನುಭವಿಸಿದ್ದೇನೆ. ಚಿತ್ರ ನಂ. 1ನ್ನು ತೆಗೆದುಕೊಳ್ಳಿ. 11ನೇ ಶತಮಾನದಲ್ಲಿ ನಿರ್ಮಿತವಾದ ಶಿಲ್ಪ, ಒಬ್ಬ ಸ್ತ್ರೀ ಪ್ರೇಮ ಪತ್ರ ಬರೆಯುವ ಸಂದರ್ಭ, ಆದರೆ ಆ ಸಂದರ್ಭದಲ್ಲಿ ಅವಳ ನಿಂತ ಭಂಗಿ, ಮೈಮಾಟ ಆಭರಣವಿಲ್ಲವನ್ನೂ ಕೂಲಂಕಷವಾಗಿ ವೀಕ್ಷಿಸಿದರೆ ನಾವು ಕನಸಿನ ಲೋಕಕ್ಕೆ ತೆರಳುತ್ತೇವೆ!

ಇನ್ನು ಕೇಶಾಲಂಕಾರದ

ಚಿತ್ರ –4



ಚಿತ್ರ –1

ಬೆಡಗನ್ನು ನೋಡಿದರಂತೂ, ಇಷ್ಟೊಂದು ಕಲ್ಪನೆ ಆಗಿನ ಕಲಾವಿದರಿಗೆ ಹೇಗೆ ಹೊಳೆಯಿತೆಂಬುದು ಕಲ್ಪನಾತೀತ. ಭುವನೇಶ್ವರದ ಈ ಶಿಲ್ಪ ಕಲಕತ್ತಾ ವಸ್ತು ಸಂಗ್ರಹಾಲಯದಲ್ಲಿದೆ.

ಓಗೆಯೇ ಚಿತ್ರ ನಂ. 2 "ಅಲಸಾಕನ್ಯಾ" 10ನೇ ಶತಮಾನದ ಈ ಶಿಲ್ಪ ಭುವನೇಶ್ವರದ ಲಿಂಗರಾಜ ಮಂದಿರದಲ್ಲಿದೆ, ದೇಹಮಾಲಬಿಟ, ಇಲ್ಲಿ ಕರ್ಣ ಕುಂಡಲಕ್ಕೆ ಹೆಚ್ಚಿನ ಪ್ರಾಧಾನ್ಯ. ಕೇಶಾಲಂಕಾರದ ರೀತಿಯನ್ನು ನೋಡಿ ಆಭರಣಗಳಿಗೆ ಪ್ರಾಧಾನ್ಯ ನೀಡಲಾಗಿದೆ. ಗುಂಗುರುಗೂದಲನ್ನೇ ಬಳಸಿ ತಕ್ಕ ಜಡೆಯನ್ನು ಹೆಣೆಯಲಾಗಿದೆ. ಜಡೆಗೆ ತಕ್ಕಂತೆ ಚಿನ್ನದ ಪುಷ್ಪ!

3ನೆಯೇ ಚಿತ್ರ ನಾಗ ಕನ್ಯ. ಓಂದೆ ಐದು ಹೆಡೆಯ ಸರ್ಪ, ಉದ್ದ ಕೂದಲು, ಇಳಿಬಿದ್ದಿವೆ. ಮೇಲಿನ ಕೇಶ ಅಲಂಕಾರವಾಗಿ ತುದಿಯಲ್ಲಿ ಚಂಡಿನಾಕಾರದಲ್ಲ ದುಂಡಗೆ ಕಟ್ಟಲಾಗಿದೆ, ಸರ್ಪಕ್ಕೆ ತಕ್ಕ ಮೈಮಣಿತ, ಕಂಬಕ್ಕೆ ಸುತ್ತಿಕೊಂಡ ದೇಹ. 10ನೆಯ ಶತಮಾನದಲ್ಲಿ ನಿರ್ಮಾಣವಾದ ಈ ಶಿಲ್ಪ ಭುವನೇಶ್ವರ ಲಿಂಗರಾಜ ಮುಂದಿರದಲ್ಲಿದೆ! ಬಲಗೈಯಲ್ಲಿ ವಸ್ತ್ರಾ ಎಡಗೈಯಲ್ಲಿ ಅಗ್ನಿಗಳಿದ್ದರೆ ಚಿನ್ನ ಅರ್ಥ ಮಾತ್ರ ತಿಳಿಯದು!

ಚಿತ್ರ –10

ಚಿತ್ರ – 5

4ನೇಯ ಚಿತ್ರ, ವಿಚಿತ್ರ ಜಡೆ. ಆದರೂ ಅದನ್ನು ಹೆಣೆದಿರುವ ರೀತಿಯನ್ನು ನೋಡಿದರೆ ಒಂದು ಸಾದಾ ರೀತಿಯಲ್ಲಿ ನಿರ್ಮಿತವಾದ ಕಲಾಕೃತಿ. ಕಲಾಕೃತಿಯೆಂದರೆ– ಶಿಲ್ಪದ ಬಗ್ಗೆ ಹೇಳುವ ಮಾತಲ್ಲ. ಕೇಶವನ್ನು ಹೊಂದಿಸಿದ ರೀತಿಯ ಬಗ್ಗೆ ಹೇಳುವ ಮಾತು. ಗೋಪುರದಂತೆ ಆ ಕೇಶವನ್ನು ಹೇಗೆ ಕಟ್ಟಿ ನಿಲ್ಲಿಸುತ್ತಿದ್ದರೋ, ಹೂವಿರುವ ಅಶೋಕ ವೃಕ್ಷದ ಎರಡು ಎಲೆಗಳು ಜಡೆಗೆ ಅಲಂಕಾರವಾಗಿ ಇಳಿಬಿದ್ದಿವೆ. ಹೀಗೆ ಆ ಚತುರ ಶಿಲ್ಪಿಗಳು, ದೇಹದ ಮಾಟ, ನಿಂತ ಭಂಗಿ ಕೇಶದ ಉದ್ದಳತೆ ಇವನ್ನೆಲ್ಲ ಗಮನದಲ್ಲಿಟ್ಟುಕೊಂಡೇ ಜಡೆಯ ನಕ್ಷೆಯನ್ನು ಸಿದ್ಧಮಾಡುತ್ತಿದ್ದರೇನೋ? ಈ ಚಿತ್ರದಲ್ಲಿ ಅಲಂಕಾರಕ್ಕೆ ಜಡೆಯ ಒಂದು ಪುಷ್ಪವೂ ಇಲ್ಲದ್ದನ್ನು ಗಮನಿಸಬೇಕು.

5ನೇಯ ಚಿತ್ರ ಪಾರ್ವತಿಯ ಮುಖವೆಂದು ಗಮನಿಸಿದ ಈ ಶಿಲ್ಪ 5ನೆಯ ಶತಮಾನದ್ದು. ಇದ್ದ ಗುಂಗುರುಗೂದಲಿನಲ್ಲಿ ಹೆಣೆದ ಹೆರಳು ಎಂಥ ಸುಂದರವಾದ ವಿನ್ಯಾಸ! ಹೆಚ್ಚು ಅಲಂಕಾರವಿಲ್ಲ, ಅಷ್ಟರಲ್ಲಿಯೇ ತುರುಬು, ಉದ್ದ ಕಡಿಮೆಯಿದ್ದ ಕೇಶಕ್ಕೂ ಯೋಗ್ಯ ರೀತಿಯ ಅಲಂಕಾರವನ್ನು ಅಳವಡಿಸುವ ಅಂದಿನ ಶಿಲ್ಪಿಗಳಿಗೆ ಎಷ್ಟು ಕರಗತವಾಗಿತ್ತೆಂಬುದಕ್ಕೆ ಇದೊಂದು ಉದಾಹರಣೆ ಎನ್ನೋಣವೆ?

6ನೇ ಚಿತ್ರದಲ್ಲಿಯ ಶಿಲಾಕೃತಿಯ ಕೇಶ ಉದ್ದವಾಗಿವೆ ಎಂಬುದನ್ನು ನೋಡುತ್ತಲೇ ಗಮನಿಸಬಹುದು, ಅಂಥ ಪ್ರಸಂಗದಲ್ಲಿ ಹೆರಳಿನ ನಕ್ಷೆಗೆ ಎಂಥ ಸೂಕ್ಷ್ಮತೆ ಬರುತ್ತದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಮೂರು ಎಸಳಿನ ಜಡೆ, ಎರಡೆಸಳಿನ ಮುರುವು, ಹಾಗೆಯೇ ಒಟ್ಟು ಕೂದಲಿನ ದೊಡ್ಡ ತುರುಬು, ನಂತರ ಇಳಿಬಿಟ್ಟ ಕೇಶರಾಶಿ, ತಕ್ಕ ಅಲಂಕಾರ- ಅಲ್ಲವೇ ಅಲಂಕಾರ ಈ ರೀತಿಯಾಗಿ ಶಿಲ್ಪಿಗಳ ಕಲ್ಪನೆ ಎಸಳೆಸಾಗಿ ಹರಿಯುತ್ತದೆ– ತಕ್ಕ ರೂಪತಳೆಯುತ್ತದೆ.

ಚಿತ್ರ ಏಳು (7) ಇಲ್ಲಿಯೂ ಕೇಶರಾಶಿ ಉದ್ದವಾಗಿದೆಯೆಂಬುದನ್ನು 6ನೇ ಚಿತ್ರವನ್ನು ನೆನೆದೇ ಹೇಳಬೇಕು. ಹೆರಳು ವಿವಿಧ ಮುಡಿಗೆ, ಜಡೆಯಲ್ಲಿ ರೂಪತಾಳಿ ರೂಪಗೊಂಡ, ಕೇಶರಾಶಿ, ಎಂಥ ಕೇಶವಿದ್ದರೂ ತಕ್ಕ ರೂಪ ನೀಡಿ, ಕೇಶಗುಚ್ಛವನ್ನೇ ಒಂದು ಕಲೆಯ ಮುದ್ದೆಯನ್ನಾಗಿ ನಿರ್ಮಿಸುವ, ಈ ಕಲಾಕಾರರಿಗೆ ಎಂಥ ಅಭಿನಂದನೆ ನೀಡಬೇಕು...!

ಉದ್ದ ಕೇಶರಾಶಿ, ನೀಳ್ಗ



ಚಿತ್ರ – 7

ದಲು ಇವುಗಳ ವಿನ್ಯಾಸ ಕಂಡಾಯಿತು, 8ನೇ ಚಿತ್ರದ ಕೇಶದ ರೂಪವೇ ಬೇರೆಯಾಗಿದೆ! ಅಂದರೆ [illegible] ಅದು ಅದ್ಭುತವಾಗಿ ಬೆಳೆದ ಕೇಶ ರಾಶಿ, ಅದು ಹೇಗೆ' ಎಂದು ನಾವು ಕೇಳುವ ಆತುರ ಮಾಡಬಹುದು! ಈ ಯುಗದಲ್ಲಿ ಸತ್ಯಸಾಯಿಬಾಬಾರ ಬೆಳೆದ ಕೇಶರಾಶಿ ಬಿಟ್ಟರೆ' ಆ ರೀತಿಗೆ ನಾನು ಅಷ್ಟ ಬೆಳೆದ ಕೇಶ ಎಂದುಕೊಂಡಿದ್ದೇನೆ. ಇದು ಅಪರೂಪವಾಗಿ ಬೆಳೆಯುವ ಶೈಲಿ. ಆದರೆ ಅಂದಿನ ಶಿಲ್ಪಿಗಳು ಏನಿಲ್ಲದ್ದನ್ನೆಲ್ಲ ಕಲ್ಪಿಸಿ ಅದಕ್ಕೆ ಒಂದು ವಿನ್ಯಾಸವನ್ನು ಹೊಂದಿಸಿಕೊಂಡು, ತಕ್ಕ ಆಲಂಕಾರಿಕ ವಸ್ತುಗಳನ್ನು ಜೋಡಿಸಿಕೊಂಡು ಶಿಲ್ಪದ ನಿರ್ಮಾಣ ಒಂದನ್ನು ಕಲಾಕೃತಿಯಾಗಿ ನಿರ್ಮಿಸುವ ಚಾತುರ್ಯ!

9ನೇ ಚಿತ್ರ ಕೇಶಾಲಂಕಾರದ ಶೈಲಿ 6ನೇ ಚಿತ್ರದ ಶೈಲಿಯನ್ನೇ ನೆನಪಿಗೆ ತರುತ್ತದೆ. ಉದ್ದವಾದ ನೀಳವಾದ ಕೇಶರಾಶಿ. ಅದುದು [illegible] ಲಂಕಾರಕ್ಕಾಗಿ ಕೇಶವನ್ನು [illegible] ರೆಯಿ [illegible] ಬರುತ್ತದೆ! ಇಲ್ಲಿ ಕೇಶವನ್ನು ಬೇಕೆಂದಲ್ಲಿ ಮಣಿಸಿ ಅಲಂಕಾರಕ್ಕೆ ಅಣಿಗೊಳಿಸಿದ್ದಾರೆ! ಅಲಂಕಾರಕ್ಕಾಗಿ ತೀರ ಕಡಿಮೆ ವಸ್ತುಗಳನ್ನು ಅಳವಡಿಸಿದ್ದಾರೆ. ಎಂಥಾ ಚಾತುರ್ಯ! ಪ್ರಾಚೀನರು ಅಲಂಕಾರಕ್ಕಾಗಿ ಎಂದೂ [illegible] ಮೊಂಡು ಮಾಡಲ್ಲ. [illegible] ಹಚ್ಚಿಲ್ಲ. ಅದಿಲ್ಲದೇ ಅದರ ಅರಿವು ಬರುವಂತೆ ಅಲಂಕಾರವನ್ನು ಅಷ್ಟು ಚಾಣಾಕ್ಷತೆಯಿಂದ ಮಾಡಿದ್ದಾರೆ.

ಚಿಕ್ಕ ಕೇಶಗಳ– ಅಂದರೆ ಉದ್ದ ಕಡಿಮೆಯಿದ್ದು ಕೇಶಗಳ ಅಲಂಕಾರದ ಬಗ್ಗೆ ಮಾತು ಈವರೆಗೆ ಬರಲಿಲ್ಲವಲ್ಲವೆ? 10ನೇ ಚಿತ್ರ ಅದನ್ನು ಹೇಳುತ್ತದೆ– ಬೇಲೂರಿನ ಮದನಿಕೆ– 12ನೇ ಶತಮಾನದ ಆ ಶಿಲ್ಪ ಹಾಗೆ ಅಲಂಕಾರವಾದ ಶಿಲ್ಪ ಕೂದಲೂ ಚಿಕ್ಕದಾದರೂ, ಬಳಸಿದ ಅಲಂಕಾರ ವಸ್ತುಗಳಿಂದ ಸಜ್ಜುಗೊಳಿಸಿದ ಈ ಅಲಂಕಾರ ವಿಷ್ಟು ಮುದ್ದಾಗಿದೆಯೆಂದರೆ, ಅದನ್ನು ಹೇಗೆ ಹೆಣೆದರು [illegible] ನನ್ನ ಯೋಚನೆ

ಚಿತ್ರ – 6





ಚಿತ್ರ – 9

ಚಿತ್ರ – 3

ಕೇಶಾಲಂಕಾರದ ಒಂದು ವಿಷಯದಲ್ಲೇ ಇಷ್ಟು ವಿಧ! ಕೇಶಾಲಂಕಾರಕ್ಕೆ ಬಳಸುವ ವಸ್ತುಗಳ ವಿಧಗಳೂ ಸಾವಿರ ಸಂಖ್ಯೆ ಲಕ್ಷ ಸಂಖ್ಯೆಯಲ್ಲೂ ಇರಬಹುದು. ಹಾಗೆಯೇ ಜಡೆಯೂ, ಆ ಶಿರೆಯಲ್ಲಿ ಬಟ್ಟೆಯಲ್ಲಿ ನೆಗೆದ ನಕ್ಷತ್ರಗಳ ವೈವಿಧ್ಯ, ತೋರಿಸುವ ರೀತಿ, ರಚನೆ, ಅದರ ವಿನ್ಯಾಸ ಈ ರೀತಿಯಾಗಿ ಎಲ್ಲದರೂ ಪ್ರತ್ಯೇಕತೆ ಕಾಣುತ್ತದೆ.

ಹಾಗೆಯೇ ಆಭರಣಗಳು. ಉಂಗುಷ್ಠದಿಂದ ನೆತ್ತಿಯವರೆಗೂ ತೊಡಿಸುವ ಪ್ರತಿಯೊಂದು ಆಭರಣವೂ ಭಿನ್ನ! ಆಕೃತಿಯಲ್ಲಿ ಭಿನ್ನ, ಆಕಾರದಲ್ಲಿ ಭಿನ.

ಹೀಗೆ ಯಾವ ರಾಜರ ಸಮಯದಲ್ಲೇ ಇರಲಿ, ಕೃತಿ ಎಂತಹದೋ ಆಗಿರಲಿ, ಮಾಡಿರುವ ಆ ವಿನ್ಯಾಸ, ನಕ ಹಾಗೂ ಕೆತ್ತನೆ ಬಹು ಅಂದವಾದುದು ಎಂಬುದನ್ನು ಅಲ್ಲಗಳೆಯುವಂತಿಲ್ಲ! ಹೀಗೆ ಶತಶತಮಾನಕ್ಕೂ ವಿನ್ಯಾಸಗಳ ಅಭಿವೃದ್ಧಿ ಮಾಡುತ್ತಲೇ ಬಂದಿದ್ದಾರೆ, ಅಂದಿನ ಶಿಲ್ಪಿಗಳು. ಈಗಿನವರು ಮಣ್ಣಿನಲ್ಲಿ ಮಾಡಲಾಗದ್ದನ್ನು ಶಿಲೆಯಲ್ಲಿ ನಿರ್ಮಿಸಿದ್ದಾರೆ– ಇಂದಿನ ಬ್ಯೂಟಿ ಪಾರ್ಲರ್‌ಗಳು. ಈ ವಿನ್ಯಾಸಗಳನ್ನು ಮಾಡಲು ಪ್ರಯತ್ನಿಸಿದರೆ ಯಶ ದೊರಕಿಸಲು ಸಾಧ್ಯವೇ ಎಂಬುದನ್ನು ನಿರೀಕ್ಷಿಸಿ ನೋಡಬೇಕು. ■

ಚಿತ್ರ – 2

ಗಳಲ್ಲಿ ಹೂತು ಹೋಗುತ್ತದೆ. ಈ ರೀತಿಯಾಗಿ, ಅಂದಿನ ಶಿಲ್ಪಿಗಳು ನಮ್ಮನ್ನು ಅವರ ಕಲ್ಪನೆಯ ಜೋಡಿ ನೋಡಿ ನಮ್ಮನ್ನು ಬಲೆ ಹಾಕುತ್ತಾರೆ, ಅದೇ ಅವರ ಚಾತುರ್ಯ!

ಇವನ್ನೆಲ್ಲ ಒಂದೊಂದಾಗಿ ನೋಡಿದಾಗ, ನೋಟಕ ಭ್ರಮೆ ಬೀಳುತ್ತಾನೆ, ಇವು ಕೇವಲ ಕೆಲ ಚಿತ್ರಗಳು ಮಾತ್ರ. ಭಾರತದ ಉದ್ದಗಲಕ್ಕೂ ಸೂಕ್ಷ್ಮವಾಗಿ ನೋಡುತ್ತಾ ಹೋದರೆ– ಅದನ್ನು ಮನಸ್ಸಿನ ತರುವುದು ಕಷ್ಟ–

ಈ ಪ್ರಾಚೀನ ಕಲಾವಿದರ ಕೇಶಾಲಂಕಾರಗಳನ್ನು ನೋಡಿದರೆ, ಈಗಿನ ಜನರ ಅಲಂಕಾರ ಅವರ ಕಲ್ಪನೆಯ ಸುಳಿಯನ್ನೂ ಮನತರಲೂ ಸಾಧ್ಯವಿದೆಯೇ ಎಂಬ ಅನುಮಾನ ಬರುತ್ತದೆ.

# ಪ್ರಾಚೀನ ಕಲೆ 'ಕಸೂತಿ'

ಚಿತ್ರ ಮತ್ತು ಲೇಖನ: ಎಸ್. ಸಿ. ದೇಸಾಯಿ

ಕಸೂತಿ ಎಂದರೆ ಹಣಿಗೆಯ ಕೆಲಸ! ಉತ್ತರ ಕರ್ನಾಟಕದಲ್ಲಿಯ ವಿಶಿಷ್ಟ ರೀತಿಯದ್ದು. ಅದರಲ್ಲಿಯ 'ಇಳಕಲ್' ಸೀರೆಗಳ ಮೇಲೆ ಹಣೆದ 'ಟೀಕೆ' ಕಸೂತಿಗೆ ಶ್ರೇಷ್ಠ ಉದಾಹರಣೆ. ಜರಿ ಸೀರೆಗಳ ಮೇಲಲ್ಲ ಕುಪ್ಪಸ, ಮಕ್ಕಳ ಅಂಗ (ಪರಕಾರ) ಕುಂಚಿಗೆ (ಕುಲಾಯಿ) ಹಾಗೂ ಮನೆಯಲ್ಲಿಯ ಅಲಂಕಾರಿಕ ವಸ್ತುಗಳ ಮೇಲೂ ಇದನ್ನು ಕಾಣುತ್ತೇವೆ.

ಈ ಕಲೆಗೆ ಒಂದು ಇತಿಹಾಸವಿದೆ. ಗುಪ್ತ ಸಾಮ್ರಾಜ್ಯದ ಅವನತಿಯಾದ ಮೇಲೆ ಭಾರತವು ೬ನೇ ಶತಮಾನದಿಂದ ೧೧ನೆಯ ಶತಮಾನದ ಕಾಲದಲ್ಲಿ ಮತ್ತೊಂದು ಸುವರ್ಣಯುಗವನ್ನು ಕಂಡಿತು. ಪೈಠಣದ ಶಾತವಾಹನರು, ಬಾದಾಮಿಯ ಚಾಲುಕ್ಯರು, ಮಳಖೇಡದ ರಾಷ್ಟ್ರಕೂಟರು ಕಂಚಿಯ ಪಲ್ಲವರು, ಪಾಂಡ್ಯರು, ಚೋಳರು, ಅಲ್ಲದೆ ಇನ್ನು ಕೆಲ ಚಿಕ್ಕ ಪುಟ್ಟ ರಾಜರು, ನರ್ಮದೆಯ ದಕ್ಷಿಣದಲ್ಲಿ ಆಳಿದರು. ಇವರಲ್ಲಿ ಒಳಜಗಳ, ಯುದ್ಧಗಳು ನಡೆಯುತ್ತಿದ್ದರೂ ಧಾರ್ಮಿಕ ಪ್ರವೃತ್ತಿ, ಕಲಾ ಪ್ರೇಮಗಳು ಮಾತ್ರ ಸಮನಾಗಿದ್ದುವು.

ಅದು ಬೌದ್ಧಧರ್ಮದ ಅವನತಿಯ ಕಾಲ. ಈ ರಾಜಮಹಾರಾಜರುಗಳೆಲ್ಲ ಹಿಂದೂಧರ್ಮದ ಏಳಿಗೆಗೆ ಸಾಕಷ್ಟು ಪ್ರೋತ್ಸಾಹ ನೀಡಿದ್ದರು. ಅನೇಕ ದೇವಾಲಯಗಳು, ಗುಹೆಗಳು ಅಸ್ತಿತ್ವಕ್ಕೆ ಬಂದವು. ಇವೆಲ್ಲ ಇಂದಿಗೂ ಅವರ ಕಲಾಪ್ರೇಮದ ದ್ಯೋತಕಗಳಾಗಿ ನಿಂತಿವೆ. ಶಿಲ್ಪ ಕಲೆಯಷ್ಟೇ ಅಲ್ಲ, ಉಳಿದ ಕಲೆಗಳಿಗೂ ಅವರು ಪ್ರೋತ್ಸಾಹವಿತ್ತರು.

ಪುರುಷಸ್ತೋಮ ಹೀಗೆ ಕಲೆಯ ನಿರ್ಮಾಣದಲ್ಲಿ, ಬೇಸಾಯದಲ್ಲಿ, ಇನ್ನು ಕೆಲವರು ಈ ಯುದ್ಧಗಳಲ್ಲಿ ತೊಡಗಿದಾಗ, ಸ್ತ್ರೀಸಮೂಹ ತನ್ನ ವೇಳೆಯ ಉಪಯೋಗವನ್ನು ಈ ಕಸೂತಿಯ ಕಲೆಯೆಡೆಗೆ ಹರಿಸಿರುವುದು ಸಹಜವೆ ಎಂದು ಊಹಿಸಬಹುದು. ಇನ್ನೊಂದು ಗಮನಾರ್ಹ ವಿಷಯವೆಂದರೆ, ಪುರುಷರಿಂದ ನಿರ್ಮಾಣವಾಗುತ್ತಿದ್ದ ಶಿಲ್ಪದ ಛಾಯೆಯೂ ಈ ಕಸೂತಿಯಲ್ಲಿ ಕಾಣಬರುವುದು ಮಂದಿರಗಳಲ್ಲಿ, ರಥಗಳ ಮೇಲೆ ನಿರ್ಮಾಣವಾಗುತ್ತಿದ್ದ ನಕ್ಷೆಗಳೇ ಕಸೂತಿಯ



↑ ಇಳಕಲ್ಲ ಸೀರೆಯ ವೈಶಿಷ್ಟ್ಯ, ವಿವಿಧ ನಮೂನೆಯ ಕಸೂತಿ ಡಿಸೈನುಗಳು

ಕಣ್ಣಿಗೆ ಕಣ್ಣಾಟ್ಟ್ ಸೆಳೆಯುದಕು

ವಿಷಯಗಳನ್ನೊಳಗೊಂಡವನ್ನು ಸೂಕ್ಷ್ಮವಾಗಿ ಅವಲೋಕಿಸಬಹುದು.

ಗೋಪುರ, ರಥ, ಪಲ್ಲಕ್ಕಿ, ವಿಷ್ಣುಪಾದ, ಬೃಂದಾವನ, [illegible], ಅಷ್ಟದಳ [illegible]. [illegible], ಆನೆ, ಜಿಂಕೆ, ಒಳಗೊಂಡ ಮುಂತಾದ [illegible] ನವಿಲು, ಗಿಳಿ [illegible] ಹೂವು, ಗಿಡಬಳ್ಳಿಗಳು ಕಸೂತಿ ಕಲೆಯ ವಸ್ತುಗಳಾಗಿವೆ.

ಈ ಕಸೂತಿ ಕಲೆ ಹೆಚ್ಚಾಗಿ ಲಿಂಗಾಯತ ಬಾಂಧವರ ಕುಟುಂಬಗಳಲ್ಲಿಯೇ ಬೆಳೆದು ಬಂದಿದೆ ಎಂಬುದು ಮಹತ್ವದ ವಿಷಯ. ಇಷ್ಟೇ ಅಲ್ಲ, ಮದುವೆಯಾದ ಮಗಳಿಗೆ ಪೂರ್ಣ ಕಸೂತಿಯಿಂದ ಸಿದ್ಧವಾದ ಒಂದು ಸೀರೆಯನ್ನು ಕೊಡಬೇಕೆಂಬ ಪದ್ಧತಿಯೂ ಇದ್ದಿತ್ತು. ಕಾಲಕ್ರಮೇಣ ಈ ಪದ್ಧತಿ ನಶಿಸಿಹೋಗುತ್ತಿರುವುದು ವಿಷಾದನೀಯ. ಈಗಲೂ ಶಿಕ್ಷಣದಿಂದ

